## 55

# ದೀಕ್ಷಾಸ್ನಾನವು ದೀಕ್ಷಾಸ್ನಾನವಾಗದೆ ಇರುವಾಗ?

## (18:22, 23; 19:1-7)

ಒಬ್ಬ ಸ್ನೇಹಿತನೊಂದಿಗೆ (ನಾವು ಅವನನ್ನು ಬೆರ್ಟ್ ಎಂದು ಕರೆಯೋಣ) ದೀಕ್ಷಾಸ್ನಾನ ಕುರಿತು ಚರ್ಚೆ ಮಾಡುವವರೆಗೆ, ಅಧ್ಯಯನವು ಸರಿಯಾಗಿಯೇ ನಡೆಯುತ್ತಿತ್ತು. ದೀಕ್ಷಾಸ್ನಾನ ಹೊಂದುವದಾಗಲೀ ಅಥವಾ ಹೊಂದದೆ ಇರುವುದಾಗಲೀ, ಈ ಎರಡರ ನಡುವೆ ಯಾವುದೇ ವಿಧವಾದ ವ್ಯತ್ಯಾಸಗಳನ್ನು ಕಾಣುವದಿಲ್ಲ ಎಂದು ಬೆರ್ಟನು ಕಟುವಾಗಿಯೇ ವಾದ ಮಾಡಿದನು. ಮಾರ್ಕ 16:16 ಮತ್ತು ಅಪೊಸ್ತಲರ ಕೃತ್ಯಗಳು 2:38ರಲ್ಲಿ, ದೀಕ್ಷಾಸ್ನಾನಕ್ಕೂ ಮತ್ತು ರಕ್ಷಣೆಗೂ ಇರುವ ಸಂಬಂಧವನ್ನು ನೋಡುತ್ತೇವೆ, ಆದರೆ ಬೆರ್ಟನು ಅದನ್ನು ತಳ್ಳಿಹಾಕಿದನು. ಈ ಕುರಿತ ಅಧ್ಯಯನವನ್ನು ಮುಂದುವರಿಸುವ ಮೊದಲು, ಒಂದು ಅಂಶವನ್ನು ಸ್ಪಷ್ಟಪಡಿಸಬೇಕು, ನಾನು ಅವನಿಗೆ, ದೀಕ್ಷಾಸ್ನಾನದ ಕುರಿತು ಆಳವಾದ ಅಧ್ಯಯನವನ್ನು ಮಾಡೋಣ ಎಂದು ಹೇಳಿದನು. ವಚನ ಸಂಗ್ರಹದ ಪುಸ್ತಕದಿಂದ, ದೀಕ್ಷಾಸ್ನಾನಕ್ಕೆ ಸಂಬಂಧಪಟ್ಟ ವಾಕ್ಯಗಳನ್ನು ಆಯ್ಕೆಮಾಡಿ, ಬೆರ್ಟನಿಗೆ ಅದನ್ನು ಓದುವಂತೆ ಹೇಳಿದೆನು. ಆದರೆ ಬೆರ್ಟನು ಆ ವಾಕ್ಯಗಳು ಸಂಬಂಧಪಟ್ಟವುಗಳಲ್ಲ, ಅನಿಶ್ಚಿತವಲ್ಲ ಅಥವಾ ಒಪ್ಪಲು ಅಸಾಧ್ಯ ಎಂದು ಹೇಳಿದನು. ಅಂತಿಮವಾಗಿ ನಾವು ಅಪೊಸ್ತಲರ ಕೃತ್ಯಗಳು 19ಕ್ಕೆ ಬರುವವರೆಗೆ, ಪೂರ್ತಿ ರಾತ್ರಿಯನ್ನೇ ಕಳೆದ ಅನುಭವವಾಯಿತು.

ಅಪೊಸ್ತಲರ ಕೃತ್ಯಗಳು 19ರಲ್ಲಿ ಬೆರ್ಟನು, ಹನ್ನೆರಡು ಜನರನ್ನು ನೀರಿನಲ್ಲಿ ಮುಳುಗಿಸಿದ ವಿಷಯವನ್ನು ಓದುವಾಗ, ನಾನು ಅರ್ಧ ಮಾತ್ರ ಕೇಳಿಸಿಕೊಂಡೆನು ಯಾಕೆಂದರೆ ಅಲ್ಲಿರುವಂಥದ್ದನ್ನು ನಾನು ಅರಿತ್ತಿದ್ದೆನು. ಅಪೊಸ್ತಲರ ಕೃತ್ಯಗಳು 19:1-7ರಲ್ಲಿ ಯಾವುದೇ ಸ್ಥಿರವಾದ ಹೇಳಿಕೆಗಳು ಇರಲಿಲ್ಲ. ಆಗ ಅವನ ಮುಖದ ಮೇಲೆ ಅನಿಶ್ಚಯವಾದ ಭಾವವನ್ನು ಕಂಡೆನು. ಅವನು ಆ ವಾಕ್ಯ ಭಾಗವನ್ನು ನಿಧಾನವಾಗಿ ಅಪೊಸ್ತಲರ ಕೃತ್ಯಗಳು 19ರಲ್ಲಿ ಪುನರಾವರ್ತಿಸಿ, ಅವನು ನನ್ನ ಬಳಿ ಮಾತನಾಡುವ ಬದಲು, ತನಗೆ ತಾನೇ ಮಾತನಾಡಿಕೊಳ್ಳುತ್ತಿದ್ದನು, “ಒಂದು ವೇಳೆ ದೀಕ್ಷಾಸ್ನಾನವು ಅವರಿಗೆ ಪ್ರಮುಖವಾಗದಿದ್ದರೆ, ಅದನ್ನು ಸರಿಯಾದ ರೀತಿಯಲ್ಲಿ ಮಾಡುವ ಅಗತ್ಯವು ಏಕೆ ಉಂಟಾಯಿತು?” ದೀಕ್ಷಾಸ್ನಾನವು ಒಂದು ಸಂಕೇತ ಮಾತ್ರವಾಗಿದ್ದರೆ, ಅದನ್ನು ಪುನಃ ಮಾಡುವ ಅಗತ್ಯ ಏಕೆ ಉಂಟಾಯಿತು? ಅಂತಿಮವಾಗಿ ಬೆರ್ಟನು ಆ ವಾಕ್ಯಭಾಗವನ್ನು ಪಕ್ಷಪಾತವಿಲ್ಲದೆ ನೋಡಿದನು. ಅಪೊಸ್ತಲರ ಕೃತ್ಯಗಳು 19ರಲ್ಲಿ ಪೌಲನು ಹನ್ನೆರಡು ಜನರಿಗೆ ಪುನಃ ದೀಕ್ಷಾಸ್ನಾನ ಮಾಡಿಸಿದ ಕಥೆಯನ್ನು ಆ ರಾತ್ರಿಯಲ್ಲಿಯೇ ನಾನು ಮನಗೊಂಡೆನು.

ಈ ಘಟನೆಯು ನಮ್ಮ ಜೀವಿತಕ್ಕೆ ಹೇಗೆ ಹೊಂದಿಕೊಳ್ಳಬಹುದೆಂದು ಈ ಪಾಠದಲ್ಲಿ ಕಲಿಯೋಣ. ಅದನ್ನು ಅರಿಯುವ ಮೊದಲು, ಪೌಲನು ತನ್ನ ಮೂರನೆಯ ಸೇವಾ ಪ್ರಯಾಣವನ್ನು ಆರಂಭಿಸಿದನು ಎಂದು ನಾವು ತಿಳಿಯಬೇಕು.

### ಸಹೋದರರನ್ನು ಬಲಪಡಿಸಿದನು (18:22, 23ಟಿ 19:1)

ಪೌಲನ ಎರಡನೆಯ ಪ್ರಯಾಣವು ಅಂತ್ಯಗೊಂಡು, ಮೂರನೆಯ ಪ್ರಯಾಣವು ವೇಗ ವಾಗಿ ಉಂಟಾಯಿತು ಎಂದು ಲೂಕನು ದಾಖಲು ಮಾಡಿರುವನು. ಪೌಲನ ಅಂತಿಯೋಕ್ಯ ಮತ್ತು ಎಫೆಸದ ನಡುವಿನ ಪ್ರಯಾಣವು 1,500 ಮೈಲುಗಳಷ್ಟಿದ್ದು, ಅನೇಕ ತಿಂಗಳುಗಳಾಯಿತು

- ಇದನ್ನು ಮೂರು ವಚನಗಳಲ್ಲಿ ವಿವರಿಸಲಾಗಿದೆ:[1]

> ಕೈಸರೈಯದಲ್ಲಿ ಇಳಿದು ಯೆರೂಸಲೇಮಿಗೆ ಹೋಗಿ ಸಭೆಯನ್ನು ವಂದಿಸಿ ಅಂತಿಯೋಕ್ಯಕ್ಕೆ ಬಂದನು. ಪೌಲನು ಅಂತಿಯೋಕ್ಯದಲ್ಲಿ ಕೆಲವು ಕಾಲ ಇದ್ದು ತಿರಿಗಿ ಹೊರಟು ಕ್ರಮವಾಗಿ ಗಲಾತ್ಯ ಸೀಮೆಯಲ್ಲಿಯೂ ಫ್ರುಗ್ಯದಲ್ಲಿಯೂ ಸಂಚಾರಮಾಡುತ್ತಾ ಶಿಷ್ಯರೆಲ್ಲರನ್ನು ದೃಢಪಡಿಸಿದನು (18:22, 23).

> ಅಪೊಲ್ಲೋಸನು ಕೊರಿಂಥದಲ್ಲಿದ್ದಾಗ ಪೌಲನು ಮಲೆನಾಡಿನಲ್ಲಿ ಸಂಚಾರಮಾಡಿ ಎಫೆಸಕ್ಕೆ ಬಂದು ಕೆಲವು ಮಂದಿ ಶಿಷ್ಯರನ್ನುಕಂಡು (19:1).

ಪೌಲನು ಎಫೆಸದಲ್ಲಿ ಮಾಡುವ ಸೇವೆಯ ಕುರಿತಾಗಿ, ಅಥವಾ ಅವನ ಮೂರು ಸೇವಾ ಪ್ರಯಾಣದಲ್ಲಿ ಉಂಟಾದ ಸೇವೆಯ ಕುರಿತು ತಿಳಿಸಲು ಲೂಕನು ಕಾತುರನಾಗಿದ್ದನು. ಎಫೆಸವನ್ನು ಆಸ್ಯಸೀಮೆಯ ರತ್ನಾಭರಣ ಎಂದು ಕರೆಯುತ್ತಿದ್ದರು. ಅದು ರೋಮಾ ಪ್ರಾಂತ್ಯದ ರಾಜಧಾನಿ ಹಾಗೂ ಪ್ರಪಂಚದ ಪ್ರಮುಖ ವ್ಯಾಪಾರ ಕೇಂದ್ರವೂ ಆಗಿತ್ತು. ಅನೇಕ ದೊಡ್ಡ ಹಡಗುಗಳು ಅದರ ರೇವಿನಲ್ಲಿ ಸಾಗುತ್ತಿದ್ದವು, ಅದು ರೋಮಾಪುರದ ಪೂರ್ವ ಮಾರ್ಗದಲ್ಲಿ ನೆಲೆಗೊಂಡಿತ್ತು. ವ್ಯಾಪಾರಿಗಳೊಂದಿಗೆ, ಎಫೆಸದ ಅರ್ತೆಮಿ ದೇವಿಯ ದೇವಾಲಯವನ್ನು ನೋಡಲು ಅನೇಕ ಪ್ರವಾಸಿಗಳು ಭೇಟಿ ನೀಡುತ್ತಿದ್ದರು, ಅದು ಪ್ರಪಂಚದ ಏಳು ಅದ್ಭುತಗಳಲ್ಲಿ ಒಂದಾಗಿದೆ. ಎಫೆಸವು ಪ್ರಸಿದ್ಧಿಹೊಂದಿದ, ಅಗಮ್ಯ ಹಾಗೂ ಐಶ್ವರ್ಯವುಳ್ಳ ಪಟ್ಟಣವಾಗಿದ್ದರೂ - ಪಾಪದಲ್ಲಿ ಕಳೆದು ಹೋಗಿತ್ತು (ಎಫೆಸ 2:1, 12).

## ಕೆಲವು ಶಿಷ್ಯರನ್ನು ಬಲಪಡಿಸಿದ್ದು (19:1-7)

ಅವನು ಆ ಹೊಸ ಪಟ್ಟಣವನ್ನು ಸೇರಿದಾಗ, ಮೊದಲಿಗೆ ಸಭಾ ಮಂದಿರವನ್ನು ಸಂಧಿಸಿ (ಆ ಪಟ್ಟಣದಲ್ಲಿ ಒಬ್ಬನು ಇದ್ದಿದ್ದರೆ), ಅಲ್ಲಿ ಯಥಾರ್ಥ ಹೃದಯಗಳಿಗಾಗಿ ಹುಡುಕಾಡಿದನು. ಎಫೆಸದ ಸನ್ನಿವೇಶವು ವ್ಯತ್ಯಾಸ ಹೊಂದಿದ್ದರಿಂದ, ಅಲ್ಲಿ ಒಂದು ಚಿಕ್ಕ ಸಭೆಯು[2] ಅಕ್ವಿಲ ಹಾಗೂ ಪ್ರಿಸ್ಕಿಲರ ಮನೆಯಲ್ಲಿ ಸೇರಿ ಬಂದಿರಬಹುದು (1 ಕೊರಿಂಥ 16:19). ಆದ್ದರಿಂದ, ಮೊದಲಿಗೆ ಪೌಲನು, ಸಹೋದರರ ಸಂಗಡ ಕೆಲಕಾಲಕಳೆದನು. (ಅವನ ಹಳೆಯ ಸ್ನೇಹಿತರಾದ ಅಕ್ವಿಲ ಮತ್ತು ಪ್ರಿಸ್ಕಿಲ್ಲರನ್ನು ಕಂಡು ಅವನು ಆನಂದಗೊಂಡಿರಬಹುದು ಎಂದು ನಾನು ಆಲೋಚಿಸುತ್ತೇನೆ.)

ಪೌಲನು ಗಲಾತ್ಯ ಸೀಮೆಯಲ್ಲಿಯೂ, ಸಂಚಾರ ಮಾಡುತ್ತಾ ಕ್ರೈಸ್ತರನ್ನು ದೃಢಪಡಿಸುತ್ತಾ ಕೆಲವು ಶಿಷ್ಯರನ್ನು ಕಂಡುಕೊಂಡನು (ನೋಡಿರಿ 18:23), ಅಲ್ಲಿ "ಹನ್ನೆರಡು ಮಂದಿ ಶಿಷ್ಯರಿದ್ದರು" (19:1ಬಿ). "ಕಂಡನು" (ವಚನ 7).[3] ಎಂಬ ಪದದ ಸಾರಾಂಶವೇನು? ಅಂದರೆ ಪೌಲನಿಗೆ ಈಗಾಗಲೇ ಅವರ ಪರಿಚಯವಾಗಿ, ಅವನು ಅವರಿಗಾಗಿ ಹುಡುಕುತ್ತಿದ್ದನು ಎಂಬ ಅರ್ಥವೇ?[4] ಅಥವಾ ದೇವರೇ ಅವರನ್ನು "ಪೌಲನನ್ನು ಸಂಧಿಸುವಂತೆ ಮಾಡಿದನೆಂಬುದೇ"? ಎರಡನೆ ವಿಚಾರವನ್ನು ನಾನು ಒಪ್ಪುತ್ತೇನೆ, ಹೌದು ಪೌಲನು ಅವರನ್ನು ಸಂಧಿಸಿದನು.

ಈ ಜನರು ಈಗಾಗಲೇ ಕ್ರೈಸ್ತರಾಗಿದ್ದರೇ? ಸಾಧಾರಣವಾಗಿ, ಹೌದು, ಎಂದು ನಾವು ಹೇಳಬಹುದು. ಯೇಸುವಿನ ಹಿಂಬಾಲಕರನ್ನು ಲೂಕನು ಸಹಜವಾಗಿ "ಶಿಷ್ಯರು" ಎಂದು ಕರೆದಿರುವನು (11:26; ಇತ್ಯಾದಿ). ಆದರೆ, ಈಗ ಈ ಹನ್ನೆರಡು ಶಿಷ್ಯರನ್ನು ಕ್ರೈಸ್ತರು ಎಂದು ಕರೆದಿರುವಲ್ಲಿ, ಒಂದು ಸಮಸ್ಯೆಯಿದೆ, ಆದ್ದರಿಂದ ಪೌಲನು ಅವರನ್ನು ಕುರಿತು, "ನೀವು ನಂಬಿದಾಗ ಪವಿತ್ರಾತ್ಮ ವರವನ್ನು ಹೊಂದಿದಿರೋ?" ಎಂದು ಅವರನ್ನು ಕೇಳಲು ಅವರು ಅವನಿಗೆ - "ಇಲ್ಲ" ಎಂದು ಉತ್ತರಿಸಿದರು (19:2). ಪರಿಶುದ್ಧಾತ್ಮವನ್ನು ಹೊಂದದೆ ಇರುವವರು ಕ್ರೈಸ್ತರಲ್ಲ ಎಂಬುದನ್ನು ಹೊಸ ಒಡಂಬಡಿಕೆಯು ತಿಳಿಸುವದರಿಂದ (ಅಪೊಸ್ತಲರ ಕೃತ್ಯಗಳು

2:38; ರೋಮಾಪುರ 8:9; ತೀತ 3:5; ಇಬ್ರಿಯ 6:4; 1 ಯೋಹಾನ 3:24; 4:13), ಈ ಮನುಷ್ಯರನ್ನು ಕ್ರೈಸ್ತರೆಂದು ಪರಿಗಣಿಸಲು ಹೇಗೆ ಸಾಧ್ಯ.

ಸಾಧಾರಣವಾಗಿ, "ಶಿಷ್ಯರು" ಎಂದರೆ "ಕಲಿತು ಹಿಂಬಾಲಿಸುವವರು" ಎಂದು ಅರ್ಥವಾಗುತ್ತದೆ. ಆದರೆ ಇಲ್ಲಿ ಅವರು ಯಾರನ್ನು ಹಿಂಬಾಲಿಸಿದರು ಎಂಬುದನ್ನು ಸ್ಪಷ್ಟಪಡಿಸಿರುವದಿಲ್ಲ. ಲೂಕನು ಗ್ರೀಕ್ ಪದವನ್ನು ಬಳಸಿ "ಕೆಲವರು" ಎಂಬ ಸೂಚನೆಯನ್ನು ತಿಳಿಸಿರುವನು ಆ ಹನ್ನೆರಡು ಜನರು ಯೇಸುವಿನ ಶಿಷ್ಯರಾಗದೆ,[5] ಯೋಹಾನನ ಶಿಷ್ಯರಾಗಿರಬಹುದು ಎಂದು ಆದಿ ಕ್ರೈಸ್ತರು ತಿಳಿದಿದ್ದರು. ಶಿಷ್ಯರ ಕುರಿತು ಇತರೆ ಅನುವಾದಗಳ ಸಾಧ್ಯತೆಗಳು ಇರಬಹುದು. ಒಬ್ಬ ವಿವರಣೆಕಾರನು ಈ ವಿಚಾರವನ್ನು ಕುರಿತು: "ಮುಖ್ಯವಾದ ತತ್ವದ ಆಧಾರದ ಮೇಲೆ ಲೂಕನು ಆ ವಾಕ್ಯದ ತಾತ್ಪರ್ಯವನ್ನು ಸರಿಯಾಗಿ ತಿಳಿಸಿರುವನು: ಪೌಲನು ಸಂಧಿಸಿದ ಆ ಜನರ ಶಿಷ್ಯರಾಗಿದ್ದರು ಎಂಬ ಭಾವನೆಯನ್ನು ಮಾತ್ರ ಹೊಂದಿದ್ದರು"[6] ಹಾಗೂ ಆ ಹನ್ನೆರಡು ಮಂದಿ ಜನರನ್ನು ಪೌಲನು ಕ್ರೈಸ್ತರೆಂದು ಭಾವಿಸಿರಬಹುದು ಎಂಬುಂದು ನನ್ನ ವೈಯಕ್ತಿಕ ಅನಿಸಿಕೆಯಾಗಿದೆ, ಈ ಅನಿಸಿಕೆಯ ಮೇಲೆ ಈ ಪ್ರಶ್ನೆಯು ಅವಲಂಭಿಸಿರುತ್ತದೆ.[7]

ಪೌಲನು ಆ ಮನುಷ್ಯರನ್ನು ಕಂಡಾಗ ಅವರಿಗೆ, "ನೀವು ನಂಬಿದಾಗ ಪರಿಶುದ್ಧಾತ್ಮ ವರವನ್ನು[8] ಹೊಂದಿದಿರೋ?" ಎಂದು ಕೇಳಿದನು (19:2ಎ). "ನಂಬಿಕೆ" ಎಂಬುದು ದೀಕ್ಷಾಸ್ನಾನವನ್ನು ಒಳಗೊಂಡ ವಿಸ್ತಾರವಾದ ಅರ್ಥವನ್ನು ನೀಡುತ್ತದೆ (ವಚನ 3). ಅವರು ದೀಕ್ಷಾಸ್ನಾನ ಹೊಂದಿದಾಗ, ಪರಿಣಾಮಕಾರಿಯಾಗದ "ಸಾಧಾರಣ ಆತ್ಮನನ್ನು" ಪಡಕೊಂಡರೋ ಅಥವಾ ಪಡಕೊಳ್ಳಲಿಲ್ಲವೋ ಎಂಬ ಪ್ರಶ್ನೆಯನ್ನು ಕೇಳುತ್ತಿರುವದಿಲ್ಲ;[9] ವಾಕ್ಯಕ್ಕನುಗುಣವಾಗಿ ದೀಕ್ಷಾಸ್ನಾನ ಹೊಂದುವವನು ಸಹಜವಾಗಿ ಅದನ್ನು ಹೊಂದುವನು.[10] ಅದರ ಮುಂದಿನ ವಚನದಲ್ಲಿ ನೋಡುವಂತೆ, ಪೌಲನು ಅವರ ತಲೆಯ ಮೇಲೆ ಕೈಯನ್ನಿಡುವದರಿಂದ (ವಚನ 6), ಅವರು ಪರಿಶುದ್ಧಾತ್ಮನ ವರ ಹೊಂದಿಕೊಳ್ಳಬೇಕೆಂಬ ಆಲೋಚನೆಯನ್ನು ಅವನು ಹೊಂದಿದ್ದನು. ಆದ್ದರಿಂದ ಅಪೊಸ್ತಲನು ಕೇಳುತ್ತಿರುವದೇನೆಂದರೆ, "ನೀವು ಕ್ರೈಸ್ತರಾದಾಗ *ಮಹತ್ಕಾರ್ಯ* ಮಾಡುವ ಪರಿಶುದ್ಧಾತ್ಮನ ವರವನ್ನು ಹೊಂದಿದಿರೋ? ಎಂದು ಕೇಳಿದನು."

ಪೌಲನಿಗೆ ಆಶ್ಚರ್ಯವಾಗುವಂಥ ರೀತಿಯಲ್ಲಿ ಅವರು ಅವನಿಗೆ ಉತ್ತರ ನೀಡಿ, "ಪರಿಶುದ್ಧಾತ್ಮವರವು ಉಂಟೆಂಬದನ್ನೇ ನಾವು ಕೇಳಲಿಲ್ಲ ಅಂದರು" (ವಚನ 2ಬಿ). ಪೌಲನ ಮನಸ್ಸಿನಲ್ಲಿ ಎಚ್ಚರಿಕೆ ಉಂಟಾಯಿತು. ಅವರು ಹೊಂದಿದ ದೀಕ್ಷಾಸ್ನಾನದಲ್ಲಿ ಯಾವುದೋ ತಪ್ಪಾಗಿದೆ ಎಂದು (ಈ ಹಿಂದೆ ತಿಳಿಯದೇ ಇದ್ದದ್ದರಿಂದ) ತಿಳಿದುಕೊಂಡನು, ಯಾಕೆಂದರೆ ಮಹಾ ಆದೇಶದ ದೀಕ್ಷಾಸ್ನಾನವು *ಪರಿಶುದ್ಧಾತ್ಮನೊಂದಿಗೆ* ಅನೇಕ ಸಂಬಂಧಗಳನ್ನು ಹೊಂದಿರುತ್ತದೆ: "ಅದು ತಂದೆ ಮಗ, ಮತ್ತು ಪರಿಶುದ್ಧಾತ್ಮನ ಹೆಸರಿನ ದೀಕ್ಷಾಸ್ನಾನವನ್ನು ಒಳಗೊಂಡಿರುತ್ತದೆ" (ಮತ್ತಾಯ 28:19). ಈ ದೀಕ್ಷಾಸ್ನಾನದ ಸಂಗಡ ಪರಿಶುದ್ಧಾತ್ಮನ ವರದಾನಗಳು ಸಹ ಒಳಗೊಂಡಿರುತ್ತದೆ (ಅಪೊಸ್ತಲರ ಕೃತ್ಯಗಳು 2:38). ಆದ್ದರಿಂದ ದೀಕ್ಷಾಸ್ನಾನ ಹೊಂದಿದರು ಎಂಬುದನ್ನು "ನೀರಿನಿಂದಲೂ ಆತ್ಮದಿಂದಲೂ ಹುಟ್ಟಿದವರು ಎಂದು" ಕರೆಯಲಾಗಿದೆ (ಯೋಹಾನ 3:5).[11]

ಅಲ್ಲಿರುವ ವ್ಯಾಖ್ಯಾನ "ಪರಿಶುದ್ಧಾತ್ಮ*ನು* ಇರುವನೋ" (ಒತ್ತಿ ಹೇಳಿದ್ದು ನನ್ನದು) ಎಂಬುದು ಸರಿಯಾದ ಅನುವಾದವಾದರೂ, ಆ ವಾಕ್ಯದಲ್ಲಿ ಅಡಗಿರುವ ಅರ್ಥವನ್ನು ತಿಳಿಸುವದಿಲ್ಲ. ಆ ಹನ್ನೆರಡು ಮಂದಿ ಕೇವಲ ಸ್ನಾನಿಕನಾದ ಯೋಹಾನನ ಉಪದೇಶವನ್ನು ಅರಿತವರಾಗಿದ್ದರೂ, ಅವರು ಪರಿಶುದ್ಧಾತ್ಮನ ಕುರಿತು ಅರಿತಿರಲೇ ಬೇಕಿತು (ಮತ್ತಾಯ 3:11).[12] ಆ ವಾಕ್ಯದಲ್ಲಿರುವ ಅರ್ಥವೇನೆಂದರೆ, ಒಂದು ವೇಳೆ ಪರಿಶುದ್ಧಾತ್ಮನು ಬಂದಿದ್ದೇ ಆಗಿದ್ದರೆ, ಅವರು ಆ ಬಗ್ಗೆ ಲಕ್ಷವಹಿಸಿರಲಿಲ್ಲವಷ್ಟೆ. ಅಪೊಸ್ತಲರ ಕೃತ್ಯಗಳು 19ರಲ್ಲಿರುವ "ಅಲ್ಲಿ ಇದೆ" ಎಂಬ ಗ್ರೀಕ್ ಪದವನ್ನು ಯೋಹಾನ 7:39ರಲ್ಲಿ ಭೂತಕಾಲದಲ್ಲಿ ಹೇಳಲಾಗಿದೆ, ಅದನ್ನು ನೀಡಲಾಗಿತ್ತು

ಎಂದು ಅನುವಾದಿಸಲಾಗಿದೆ.[13] ASV (NASB ಯ ಹಿಂದಿನ ಮುದ್ರಣದಲ್ಲಿ) ಆ ಮನುಷ್ಯರು ಅಪೊಸ್ತಲರ ಕೃತ್ಯಗಳು 19ರ ಮಾತುಗಳನ್ನು, "ಆ ಆತ್ಮನನ್ನು *ನೀಡಲಾಗಿತ್ತು* ಎಂದು ನಾವು ಅರಿತಿರುವದಿಲ್ಲ" ಎಂದು ಅನುವಾದಿಸಲಾಗಿದೆ.[14] (ಒತ್ತಿ ಹೇಳಿದ್ದು ನನ್ನದು.)

ಅವರು ತಪ್ಪಾದ ದೀಕ್ಷಾಸ್ನಾನವನ್ನು ಹೊಂದಿರುವರು ಎಂದು ಪೌಲನು ತಿಳಿದು,[15] "ನೀವು ಯಾವುದನ್ನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡಿರಿ?" ಎಂದು ಕೇಳಿದನು (ಅಪೊಸ್ತಲರ ಕೃತ್ಯಗಳು 19:3ಎ),[16] ನಂತರ ಅವರು "ಯೋಹಾನನ ಬೋಧನೆಯನ್ನು ನಂಬಿ ದೀಕ್ಷಾಸ್ನಾನ" ಮಾಡಿಸಿಕೊಂಡೆವು ಎಂದು ಹೇಳಿದರು (ವಚನ 3ಬಿ). ಈ ಯೋಹಾನನ ದೀಕ್ಷಾಸ್ನಾನದ ಕುರಿತು ಅವರು ಎಲ್ಲಿ ಕಲಿತುಕೊಂಡರು? ಅವರು ಅಪೊಲ್ಲೋಸನಿಂದ ಕಲಿತಿರಬಹುದೆಂಬ ಸೂಚನೆಯನ್ನು ಈ ವಾಕ್ಯಭಾಗದಲ್ಲಿ ಅಡಗಿದೆ: "ಸ್ನಾನಿಕನಾದ ಯೋಹಾನನ ದೀಕ್ಷಾಸ್ನಾನದ ಕುರಿತು, ಮಾತ್ರ ವಾಕ್ಚಾತುರ್ಯನಾದ ಅಪೊಲ್ಲೋಸನು ತಿಳಿದಿದ್ದನು ಎಂಬ ಕಥೆಯನ್ನು ಇಲ್ಲಿ ನೋಡುತ್ತೇವೆ" (18:25), ಹಾಗೂ ಈ ಹನ್ನೆರಡು ಜನರನ್ನು ಪರಿಚಯಿಸುವಾಗ, ಲೂಕನು ಅಪೊಲ್ಲೋಸನ ಹೆಸರನ್ನು ತಿಳಿಸಿರುವನು (19:1). ಇತರ ವಿಷಯಗಳ ಸಾಧ್ಯತೆಯೂ ಇರಬಹುದು,[17] ಪಂಚಾಶತ್ತಮದ *ಹಿಂದಿನ ದಿನ* ಅಪೊಲ್ಲೋಸನು ಯೋಹಾನನ ಸ್ನಾನವನ್ನು ಹೊಂದಿರಬಹುದು ಎಂದು ಕೆಲವು ವಿದ್ವಾಂಸರ ಅಭಿಪ್ರಾಯ (ಅಪೊಸ್ತಲರ ಕೃತ್ಯಗಳು 2), ಮತ್ತು ಅವನ ಬೋಧನೆಯನ್ನು ಕೇಳಿದವರು ಪಂಚಾಶತ್ತಮದ *ನಂತರ* ದೀಕ್ಷಾಸ್ನಾನ ಮಾಡಿಸಿಕೊಂಡರು.[18] J. W. McGarvey ಯವರು ಹೀಗೆ ಬರೆದು:

> [ಆ ಮನುಷ್ಯರು ಪುನಃ ಮುಳುಗುವಿಕೆಯ ಕುರಿತು] ಸಾಧ್ಯವಾದ ಉತ್ತರವೇ ನೆಂದರೆ, ಮತ್ತು ಈ ಘಟನೆಗೆ ಸಂಬಂಧ ಪಟ್ಟಂತೆ, ಅವರು ಅಪೊಲ್ಲೋಸನಿಂದ ಸ್ನಾನ ಹೊಂದಿದ್ದರೋ, ಅಥವಾ ಅವನಂತೆ ಬೋಧಿಸಿದವರಿಂದ ಹೊಂದಿದರೋ, ಯಾಕೆಂದರೆ ಈ ಸಮಯದಲ್ಲಿ ಯೋಹಾನನ ಸ್ನಾನವು ಅದರ ಮೌಲ್ಯವನ್ನು ಕಳೆದು ಕೊಂಡಿತ್ತು.[19]

ರಿಚರ್ಡ್ ಆಸ್ಟರ್‌ರವರ ಮಾತುಗಳಂತೆ, "ಆ ಶಿಷ್ಯರುಗಳು, ಪಂಚಾಶತ್ತಮದ ನಂತರದ ಬೋಧನೆಯನ್ನು ಹೊಂದಿದವರಾಗಿ, ಪಂಚಾಶತ್ತಮದ ಹಿಂದಿನ ವಿಶ್ವಾಸಿಗಳಾಗಿದ್ದರು,"[20] ಕೆಲವು ಸಾರಿ, ಮೌಲ್ಯ ಕಳೆದುಕೊಂಡ ನಕ್ಷೆಯನ್ನು ನೋಡಿ, ನಾನು ಮಾರ್ಗವನ್ನು ತಪ್ಪಿದ್ದೇನೆ.[21] ಯಾಕೆಂದರೆ ಆ ನಕ್ಷೆಯು ನಿಸ್ತೇಜವಾಗಿ ತನ್ನ ಮೌಲ್ಯವನ್ನು ಕಳೆದುಕೊಂಡಿದ್ದಾಗಿತ್ತು. ಆ - ಹನ್ನೆರಡು ಜನರು, ಅವರ ಆತ್ಮೀಕ ಯಾತ್ರೆಯಲ್ಲಿ, ಮೌಲ್ಯ ಕಳೆದು ಕೊಂಡಿದ್ದ ಆತ್ಮೀಕ ನಕ್ಷೆಯ ಮಾರ್ಗದರ್ಶನವನ್ನು ಮಾತ್ರ ಹೊಂದಿದ್ದರು.

**ಅಪೂರ್ಣವಾದ ತಿಳುವಳಿಕೆಯನ್ನು ಹೊಂದಿದ್ದರು**

ಆ ಹನ್ನೆರಡು ಜನರು ತಿಳುವಳಿಕೆಯಲ್ಲಿ ಅಪೂರ್ಣರಾಗಿದ್ದರಿಂದ, ಅವರಿಗೆ ಉಪದೇಶಿಸುವ ಅಗತ್ಯವಿತ್ತು. ಆದ್ದರಿಂದ ಪೌಲನು ಅವರಿಗೆ ಉಪದೇಶಿಸಿದನು:[22] "ಯೋಹಾನನು[23] ದೇವರ ಕಡೆಗೆ ತಿರುಗಿಕೊಂಡವರಿಗೆ ದೀಕ್ಷಾಸ್ನಾನ ಮಾಡಿಸಿ ತನ್ನ ಹಿಂದೆ ಬರುವಾತಾನಲ್ಲಿ ಅಂದರೆ ಯೇಸುವಿನಲ್ಲಿ ನಂಬಿಕೆ ಇಡಬೇಕೆಂಬುದಾಗಿ ಜನರಿಗೆ ಹೇಳಿದನು" (19:4). ಅಪೊಸ್ತಲರ ಕೃತ್ಯದಲ್ಲಿ ಲೂಕನು ಪರಿಶುದ್ಧಾತ್ಮ ಪ್ರೇರಿತವಾದ ಸಂಕ್ಷೇಪ ಸಂದೇಶವನ್ನು ನೀಡಿರುವನು, ಆದರೆ ಪೌಲನು ತನ್ನ ಸಂದೇಶವನ್ನು ಯೋಹಾನ ಉಪದೇಶದ ಅಂಶದಿಂದ ಆರಂಭಿಸಿದನು. ಯೋಹಾನನ ನಂತರ ಬಂದಾತನಿಂದ ಪೌಲನು ಆರಂಭಿಸಬಹುದಿತ್ತು, "ಅಂದರೆ ಯೇಸುವಿನ" ಮರಣ, ಸಮಾಧಿ, ಹಾಗೂ ಪುನರುತ್ಥಾನದಿಂದ; ಹಾಗೂ ಆತನು ಪರಲೋಕಕ್ಕೆ ಏರಿಹೋದ, ಪರಿಶುದ್ಧಾತ್ಮನನ್ನು ಕಳುಹಿಸಿದ ಕುರಿತು; ಸಭೆಯ ಸ್ಥಾಪನೆ. ಸಂಘಟನೆ ಹಾಗೂ ಅದರ ಬೆಳವಣಿಗೆಯ ಕುರಿತು ಹೇಳಿರಬಹುದು. ಪೌಲನು ಆ ಹನ್ನೆರಡು

ಜನರು (ವಚನ 5) ನಂಬಿದ್ದ ದೀಕ್ಷಾಸ್ನಾನದ ಸಂಗಡ, ಯೇಸುವಿನ ಹೆಸರಿನಲ್ಲಿ ಹೊಂದ ಬೇಕಾದ ದೀಕ್ಷಾಸ್ನಾನವನ್ನು ಅರ್ಥಗರ್ಭಿತವಾಗಿಯೂ, ಎಚ್ಚರದಿಂದಲೂ ವಿವರಿಸಿದನು.

"ನೀವು ನಂಬಿದಾಗ ಪವಿತ್ರಾತ್ಮನನ್ನು ಹೊಂದಿದಿರೋ?" ಎಂಬ ಪೌಲನ ಪ್ರಶ್ನೆಯನ್ನು ಹಲವು ಭಾವಪರವಶರಾಗುವ ಕ್ಯಾರೆಸ್ ಮೆಟಿಕ್ ಜನರು ಆಶಿಸುತ್ತಾರೆ. ಪವಿತ್ರಾತ್ಮ ಕುರಿತ ಬೋಧನೆಯಲ್ಲಿ ಅವರು ಈ ಪ್ರಶ್ನೆಗಳನ್ನು ಕೇಳುವರು.[24] ಆದರೆ ಪೌಲನು ಈ ಕುರಿತ ಪ್ರಶ್ನೆಯನ್ನು ಕೇಳಲಿಲ್ಲ, ಆದರೆ ಯೇಸುವಿನ ಪ್ರಸಂಗದ ಕುರಿತ ಪ್ರಶ್ನೆಯನ್ನು ಕೇಳಿ ದನು. ಪವಿತ್ರಾತ್ಮನು ತನ್ನ ಮಹಿಮೆಗಾಗಿಬಾರದೆ, ಯೇಸುವನ್ನು ಮಹಿಮೆಪಡಿಸುವದಕ್ಕೆ ಬಂದನು (ಯೋಹಾನ 16:14). ಅಪೊಸ್ತಲನಾದ ಯೋಹಾನನ ಪ್ರಕಾರ, ದೇವರ ಆತ್ಮನ ಸಾನಿಧ್ಯವನ್ನು ನಮ್ಮ ದೇಹಗಳನ್ನು ನಡುಗಿಸುವ ಅಥವಾ ಅರ್ಥಹೀನವಾದ ಮಾತುಗಳ ಮೂಲಕ ಪ್ರಚುರಪಡಿಸುವದಿಲ್ಲ. ಆದರೆ "ಯೇಸು ಕ್ರಿಸ್ತನು ಮಾನವನಾಗಿ ಬಂದನು ಎಂದು ಅರಿಕೆ ಮಾಡುವ ಮೂಲಕ ಪ್ರಚುರಪಡಿಸುತ್ತೇವೆ" (1 ಯೋಹಾನ 4:2).

**ಅಪೂರ್ಣವಾದ ವಿಧೇಯತೆಯನ್ನು ಕ್ರಮಪಡಿಸಲಾಯಿತು.**

ಪೌಲನ ಮಾತುಗಳ ನಂತರ, ಹನ್ನೆರಡು ಮಂದಿ ಜನರು ವಿವಿಧವಾದ ಪ್ರತಿಕ್ರಿಯೆ ತೋರಿಸಿರಬಹುದು. ಅವರ ದೀಕ್ಷಾಸ್ನಾನವು ದೇವರು ಮೆಚ್ಚುವಂಥದ್ದಲ್ಲ ಎಂದು ಕೇಳಿ ದಾಗ ಅವರು ಪ್ರಾಯಶಃ ಸಿಟ್ಟುಗೊಂಡಿರಬಹುದು. ಒಂದು ವೇಳೆ ಅವರು ಈ ದಿನದ ಜನರಂತೆ ಇದ್ದಿದ್ದರೆ, "ದೀಕ್ಷಾಸ್ನಾನವು ಕೇವಲ ಸಂಕೇತವಾಗಿರುವದರಿಂದ, ಅದರ ಕುರಿತು ಚಿಂತಿಸುವದು ಪ್ರಮುಖವಲ್ಲ ಎಂದು ಹೇಳುತ್ತಿರಬಹುದು. ಒಂದು ಸ್ನಾನವು, ಇನ್ನೊಂದಕ್ಕಿಂತ ಉತ್ತಮವೇ ಎಂದು ಹೇಳುತ್ತಿದ್ದರು." ಅವರ ಈ ಪ್ರತಿಕ್ರಿಯೆಯಲ್ಲಿ ಯಥಾರ್ಥತೆ ಇತ್ತು, ಪೌಲನ ಬೋಧನೆಯನ್ನು ಕೇಳಿದಾಗ, ಅವರ ತಿಳಿವಳಿಕೆಯು ಅಪೂರ್ಣ ಮಾತ್ರವಲ್ಲದೆ, ಅವರ ವಿಧೇಯತೆಯು ಸಹ ಅಪೂರ್ಣವಾಗಿತ್ತು ಎಂದು ಗ್ರಹಿಸಿಕೊಂಡರು: ಅವರು ಯಾವುದೇ ಸಂದೇಹಕ್ಕೆ ಒಳಗಾಗದೆ, "ಅವರು ಆ ಮಾತನ್ನು ಕೇಳಿ ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು" (ಅಪೊಸ್ತಲರ ಕೃತ್ಯಗಳು 19:5).

ಈ ಮನುಷ್ಯರ ದೀಕ್ಷಾಸ್ನಾನದ ಕುರಿತು ಆಲೋಚಿಸುವಾಗ, ನಮ್ಮ ಮನಸ್ಸಿನಲ್ಲಿ ಅನೇಕ ಪ್ರಶ್ನೆಗಳು ಉದ್ಭವಿಸುತ್ತವೆ: ಅವರನ್ನು ಪುನಃ ಮುಳುಗಿಸುವ ಅಗತ್ಯತೆ ಇದೆಯೋ? ಯೋಹಾನನ ಸ್ನಾನಕ್ಕೂ, ಯೇಸುವಿನ ಹೆಸರಿನಲ್ಲಿ ಪಡೆಯುವ ಸ್ನಾನಕ್ಕೂ ಯಾವ ವ್ಯತ್ಯಾಸವಿದೆ?[25] ಯೋಹಾನನ ಸ್ನಾನವು ಏಕೆ ತನ್ನ ಮೌಲ್ಯವನ್ನು ಕಳೆದುಕೊಂಡಿತು? ಎರಡನೇ ಪ್ರಶ್ನೆಯು ಅದಕ್ಕೆ ತನ್ನ ತಾತ್ಪರ್ಯವನ್ನು ನೀಡುತ್ತದೆ: ಪೌಲನದು, ಯೋಹಾನನ ಸ್ನಾನಕ್ಕಿಂತ ವಿಭಿನ್ನ ವಾಗಿತ್ತೇ?

ವಿವರಣೆಕಾರರು "*ಈ* ಎರಡರ ನಡುವಿನ ವ್ಯತ್ಯಾಸವನ್ನು" ಕುರಿತು ಗುರುತರ ವಾದ ವಿಭಜನೆಯನ್ನು ಮಾಡಿರುವರು. ಅನೇಕ ವಿಧವಾದ ವ್ಯತ್ಯಾಸಗಳನ್ನು ಕಾಣಬಹುದು. (ಯೋಹಾನನಿಗಿಂತ, ಯೇಸುವಿನ ವಿಭಿನ್ನವಾದ ದೀಕ್ಷಾಸ್ನಾನದ ಕುರಿತ ನಕ್ಷೆಯನ್ನು ನೋಡಿರಿ.) ಪವಿತ್ರಾತ್ಮನ ಕುರಿತು ಪೌಲನು ಕೇಳಿದ ಪ್ರಶ್ನೆಯನ್ನು ಗಮನಿಸೋಣ (ವಚನ 2): ಯೋಹಾನನ ದೀಕ್ಷಾಸ್ನಾನದಲ್ಲಿ ಪವಿತ್ರಾತ್ಮನ ವಾಗ್ದಾನವಿರಲಿಲ್ಲ, ಆದರೆ ಮಹಾ ಆದೇಶದ ದೀಕ್ಷಾಸ್ನಾನದಲ್ಲಿ ವಾಗ್ದಾನವು ಒಳಗೊಂಡಿತ್ತು (ಅಪೊಸ್ತಲರ ಕೃತ್ಯಗಳು 2:38).

ಪುನಃ, ಯೋಹಾನನ ದೀಕ್ಷಾಸ್ನಾನವು "ಮಾನಸಾಂತರವನ್ನು" ಒಳಗೊಂಡಿತು ಎಂದು ಪೌಲನು ತಿಳಿಸಿದನು (19:4); ಇನ್ನು ಕೆಲ ಬೇರೆ ವಚನಗಳಲ್ಲಿ ಪಶ್ಚಾತ್ತಾಪದ ಅಗತ್ಯತೆಯನ್ನು ಎತ್ತಿ ತೋರಿಸಲಾಗಿದೆ. ಹಾಗೂ ಮಹಾ ಆದೇಶದಲ್ಲಿ "ನಂಬಿಕೆಯ ದೀಕ್ಷಾಸ್ನಾನ" ಎಂದು ಇನ್ನೊಂದು ವಿಧದಲ್ಲಿ ಹೇಳಲಾಗಿದೆ. ನಂಬಿಕೆಯನ್ನು ಎತ್ತಿ ತೋರಿಸ ಲಾಗಿದೆ. ಮುಖ್ಯವಾಗಿ, ಯೇಸುವಿನ ಮರಣ, ಸಾಮಾಧಿ, ಹಾಗೂ ಪುನರುತ್ಥಾನದಲ್ಲಿರುವ

ನಂಬಿಕೆಯನ್ನು ತೋರಿಸಲಾಗಿದೆ (ರೋಮಾಪುರ 6:3, 4). ಯೋಹಾನನ ದೀಕ್ಷಾಸ್ನಾನದಲ್ಲಿ ಪಾಪದ ಅರಿಕೆ ಒಳಗೊಂಡಿತ್ತು (ಮಾರ್ಕ 1:5); ಯೇಸುವಿನ ದೀಕ್ಷಾಸ್ನಾನವನ್ನು ಹೊಂದುವ ಮೊದಲು ಜನರು *ನಂಬಿಕೆಯ* ಅರಿಕೆ ಮಾಡಿದರು (ಅಪೊಸ್ತಲರ ಕೃತ್ಯಗಳು 8:37[26]).

"ತನ್ನ *ಹಿಂದೆ ಬರಲಿರುವವನನ್ನು ನಂಬಬೇಕೆಂದು* ಯೋಹಾನನು ಹೇಳಿದನು ಎಂಬ ಹೇಳಿಕೆಯನ್ನು ಪೌಲನು ನೀಡಿದನು, ..." (ಅಪೊಸ್ತಲರ ಕೃತ್ಯಗಳು 19:4; ಒತ್ತಿ ಹೇಳಿದ್ದು ನನ್ನದು). ಯೋಹಾನನ ಶಿಷ್ಯರ ನಂಬಿಕೆಯು *ಮುಂದೆ* ಬರಲಿದ್ದ ಮಸ್ಸೀಯನನ್ನು ನಿರೀಕ್ಷಿಸುತ್ತಿತ್ತು, ನಮ್ಮ ನಂಬಿಕೆಯು ಈಗಾಗಲೇ ನಮಗಾಗಿ ಪ್ರಾಣ ಅರ್ಪಿಸಿದವನ್ನು ಅವಲಂಭನೆ ಮಾಡಿದೆ (ಗಲಾತ್ಯ 2:20). ಪ್ರಸ್ತುತದಲ್ಲಿ ಯೋಹಾನನ ಶಿಷ್ಯರು ಮುಂದೆ ಬರುವವನನ್ನು ನಿರೀಕ್ಷಿಸಿದ್ದರು, ಅವರು ಆತನ ಮರಣದ ಸಮಾಧಿಯ ಹಾಗೂ ಪುನರುತ್ಥಾನದ ಬಗ್ಗೆ ಅರಿಯದವರಾಗಿದ್ದರು. ಅದು ಸುವಾರ್ತೆಯ ಮುಖ್ಯಾಂಶವಾಗಿರುತ್ತದೆ (1 ಕೊರಿಂಥ 15:1-4). ಆದ್ದರಿಂದ, "ಅವರು ಆತನ ಮರಣಕ್ಕೆ ಸಾದೃಷ್ಯವಾದ" ದೀಕ್ಷಾಸ್ನಾನವನ್ನು ಹೊಂದಿರಲಿಲ್ಲ (ರೊಮಾಪುರ 6:5), ಹಾಗೂ ಮಹಾ ಆದೇಶದ ಪುನರುತ್ಥಾನವನ್ನು ಸಹ ಹೊಂದಿರಲಿಲ್ಲ (ರೋಮಾಪುರ 6:3). ಅವರು ಸ್ನಾನಮಾಡಲ್ಪಟ್ಟಾಗ, ಅವರ ಪಾಪಗಳು ಯೇಸುವಿನ ರಕ್ತದಿಂದ ತೊಳೆಯಲ್ಪಡುತ್ತವೆ ಎಂದು ಸಹ ಅರಿತಿರಲಿಲ್ಲ (ಅಪೊಸ್ತಲರ ಕೃತ್ಯಗಳು 22:16[27]).

ಅಂತಿಮವಾಗಿ, "ಅವರು ಅವನ ಮಾತನ್ನು ಕೇಳಿ ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು" (ವಚನ 5). ಯೋಹಾನನ ಸ್ನಾನದಲ್ಲಿ ಯಾವುದೇ ಹೆಸರನ್ನು ಅಡಕ ಮಾಡಿರುವದಿಲ್ಲ ಎಂಬ ಸೂಚನೆಯನ್ನು ಈ ಮೇಲಿನ ವಚನದಲ್ಲಿ ನೋಡುತ್ತೇವೆ. "ಮಹಾ ಆದೇಶದ ದೀಕ್ಷಾಸ್ನಾನದಲ್ಲಿ ತಂದೆ, ಮಗ, ಪರಿಶುದ್ಧಾತ್ಮನ ಹೆಸರನ್ನು ದಾಖಲು ಮಾಡಲಾಗಿದೆ" (ಮತ್ತಾಯ 28:19).[28]

ಪ್ರಸ್ತುತವಾಗಿ ನಾವು ಆ ಎರಡೂ ದೀಕ್ಷಾಸ್ನಾನಗಳನ್ನು ಹೋಲಿಸಿ ನೋಡಿದರೆ, ಎರಡೂ ಸಹ ಮುಳುಗುವ ಸ್ನಾನವೇ ಆಗಿದ್ದವು, ಅದರಲ್ಲಿ ಕೆಲವು ಗುಣಗಳು ಮಾತ್ರ ಸಮಾನವಾಗಿದ್ದವು: ಅವೆರಡೂ ಮುಳುಗುವ ಸ್ನಾನವಾಗಿದ್ದವು (ಯೋಹಾನ 3:23; ಮತ್ತಾಯ 3:16; ಅಪೊಸ್ತಲರ ಕೃತ್ಯಗಳು 8:38[29]). ಮತ್ತು "ಅವೆರಡೂ ಸಹ ಪಾಪದ ಕ್ಷಮಾಪಣೆಗೆ ಆಗಿದ್ದವು" (ಮಾರ್ಕ 1:4; ಲೂಕ 3:3; ಅಪೊಸ್ತಲರ ಕೃತ್ಯಗಳು 2:38[30]). ಇವೆರಡರಲ್ಲಿ ಸಮಾನವಾದ ಕೆಲವು ಅಂಶಗಳಿದ್ದರೂ, ಅವರು ಏಕೆ ಪುನಃ ದೀಕ್ಷಾಸ್ನಾನಮಾಡಿಸಿ ಕೊಂಡರು. ಮತ್ತು "ಕರ್ತನಾದ ಯೇಸುವಿನ ಹೆಸರಲ್ಲಿಯೇ" ಏಕೆ ಮಾಡಿಸಿಕೊಂಡರು ಎಂಬ ಪ್ರಶ್ನೆ ಉಂಟಾಗುತ್ತದೆ.

ಅವರು "ಪುನಃ ದೀಕ್ಷಾಸ್ನಾನ ಮಾಡಿಸಿಕೊಂಡರು"[31] ಎಂಬುದನ್ನು ವಾಕ್ಯ ಭಾಗವು ಸ್ಪಷ್ಟವಾಗಿ ತಿಳಿಸುವದಿಲ್ಲ. "ಪುನಃ ದೀಕ್ಷಾಸ್ನಾನ" ಮಾಡಿಸಿಕೊಳ್ಳಬೇಕೆಂದು ಸತ್ಯವೇದವು ತಿಳಿಸುವದಿಲ್ಲ. ವಾಕ್ಯದ ಪ್ರಕಾರ ಒಬ್ಬನು ಸ್ನಾನ ಹೊಂದಿದರೆ, ಅದಕ್ಕಿಂತ ಹೆಚ್ಚಿನ ಅಗತ್ಯವಿರುವದಿಲ್ಲ. ಅವನು ಪಾಪಕ್ಷಮೆ ಹೊಂದಿರುವುದು ಅವನು ಕರ್ತನಿಂದ ಸಭೆಗೆ ಸೇರ್ಪಡೆಯಾಗಿರುತ್ತಾರೆ, ಅವನು ಈ ಸಂಗತಿಗಳನ್ನು ಪುನರಾವರ್ತಿಸುವ ಅಗತ್ಯವಿಲ್ಲ. ಇನ್ನೊಂದು ಅರ್ಥದಲ್ಲಿ, ದೀಕ್ಷಾಸ್ನಾನ ಎಂಬ ಕ್ರಿಯೆಗೆ ಒಳಗೊಂಡಿದ್ದರೂ, ಆ ಸಂಗತಿಯು ಹೊಸ ಒಡಂಬಡಿಕೆಯ ಕ್ರಮದ ಅನುಸಾರವಾಗಿರದಿದ್ದರೆ, ಅವನು *ನಿಜವಾಗಿ ದೀಕ್ಷಾಸ್ನಾನ ಹೊಂದಿರುವದಿಲ್ಲ*; ಅವನು ಒದ್ದೆಯಾಗಿರುವನಷ್ಟೆ. ಒಬ್ಬನು ವ್ಯಕ್ತಿಗತವಾಗಿ ಒಂದೇ ಸಾರಿ ದೀಕ್ಷಾಸ್ನಾನ ಪಡೆಯಬೇಕು.[32]

ಆ ಹನ್ನೆರಡು ಜನರು ದೀಕ್ಷಾಸ್ನಾನ ಹೊಂದಿದ ನಂತರ, ಎಫೆಸದ ಸಣ್ಣ ಸಭೆಗೆ ಆಮಂತ್ರಣವನ್ನು ಅವರು ಪಡೆದಿರಬಹುದು. ಆ ಸಂತೋಷದ ಸಂದರ್ಭದಲ್ಲಿ, ಆ ಮನುಷ್ಯರನ್ನು ಸಂಧಿಸಿ, ಮೂಲ ತತ್ವವನ್ನು ಪಾಲಿಸಿದನು. "ಪೌಲನು ಅವರ ಮೇಲೆ ಕೈಗಳನ್ನಿಡಲು ಪರಿಶುದ್ಧಾತ್ಮ ವರವು ಅವರ ಮೇಲೆ ಬಂತು; ಅವರು ನಾನಾ ಭಾಷೆಗಳ

ನ್ನಾಡಿದರು, ಪ್ರವಾದಿಸಿದರು'' (ಅಪೊಸ್ತಲರ ಕೃತ್ಯಗಳು 19:6).[33] ಪೇತ್ರ ಯೋಹಾನರು ಸಮಾರ್ಯಕ್ಕೆ ಬಂದಾಗ, ಸಮಾರ್ಯದ ಕ್ರೈಸ್ತರ[34] ಮೇಲೆ ಕೈಗಳನ್ನಿಟ್ಟ ಕ್ರಿಯೆಯನ್ನೇ ಪೌಲನೂ ಸಹ ಮಾಡಿದನು. ಕ್ರೈಸ್ತರು ಮಹತ್ಕಾರ್ಯಗಳ ವರವನ್ನು[35] ಪಡೆಯಲು, ಅಪೊಸ್ತಲರು ಅನುಸರಿಸುತ್ತಿದ್ದ ಪದ್ಧತಿಯು ಇದಾಗಿತ್ತು. ಅವರಲ್ಲಿ ಬರೆಯಲ್ಪಟ್ಟ ಹೊಸ ಒಡಂಬಡಿಕೆಯು ಇಲ್ಲದೆ ಇದ್ದದ್ದರಿಂದ, ಹಾಗೂ ಅಪೊಸ್ತಲರು ಅವರ ಸಂಗಡ ಇಲ್ಲದೆ ಇರುವಾಗ, ದೇವರ ಚಿತ್ತವನ್ನು ಅರಿಯಲು ಹಾಗೂ ಸಭಾ ಚಟುವಟಿಕೆಗಳನ್ನು ಮುಂದುವರಿಸಲು ಈ ವರದಾನಗಳು ಉಪಯುಕ್ತವಾಗಿದ್ದವು.

ಪೌಲನು ಅವರ ಮೇಲೆ ಕೈಗಳನ್ನಿಡಲು, ಅವರು ಏಕೆ ಅನ್ಯ ಭಾಷೆಗಳಲ್ಲಿ ಮಾತನಾಡಿದರು? ಎಂಬ, ಒಂದು ಪ್ರಶ್ನೆ ಉಂಟಾಗುತ್ತದೆ. ತನ್ನ ಕೈಗಳನ್ನು ಕ್ರೈಸ್ತರ ಮೇಲೆ ಇಡುವದು ಅದು ಪೌಲನ ಸಾಮಾನ್ಯವಾದ ಕ್ರಿಯೆಯಾಗಿತ್ತು (2 ತಿಮೊಥೆ 1:6), ಆದರೆ ಆ ಒಂದು ಸಾರಿ ಮಾತ್ರ ಪೌಲನು ಈ ಸಂಗತಿಯನ್ನು ತಿಳಿಸಿರುವನು. ಉದಾಹರಣೆಗೆ, ಕೊರಿಂಥದ ಸೇವೆಯಲ್ಲಿರುವಾಗ ಪೌಲನು ಅಲ್ಲಿನ ಅನೇಕ ಕ್ರೈಸ್ತರ ಮೇಲೆ ತನ್ನ ಕೈಗಳನ್ನಿಟ್ಟಿದ್ದನು, ಆಗ ಕೆಲವರು ಅನ್ಯ ಭಾಷೆ (1 ಕೊರಿಂಥ 1:7; 12:10), ಆದರೆ ಲೂಕನು ಇದನ್ನು ದಾಖಲಿಸಿರುವದಿಲ್ಲ. ಆದರೆ ಆ ಕುರಿತಾಗಿ ಏಕೆ ಇಲ್ಲಿ ಹೇಳಿದನು? ಒಂದು ವೇಳೆ ಸಮಾರ್ಯದ ಪೇತ್ರನ ಕಾರ್ಯವನ್ನು ಹಾಗೂ ಎಫೆಸದ ಪೌಲನ ಕಾರ್ಯವನ್ನು, ಲೂಕನು ಸಮಾನ ರೇಖೆಗೆ ತಂದಿರಬಹುದು.[36] ಒಂದು ವೇಳೆ ಪುನಃ ಸ್ನಾನ ಹೊಂದಿದ ಈ ಹನ್ನೆರಡು ಜನರನ್ನು ಯಾವ ಅಡೆತಡೆಯಿಲ್ಲದೆ ಸಭೆಗೆ ಸೇರಿಸಿಕೊಂಡ ವಿಚಾರವು ಆಗಿರಬಹುದು - ಅಪೊಸ್ತಲರ ಕೃತ್ಯಗಳು 8ರಲ್ಲಿ ಅಪೊಸ್ತಲರು ಸಮಾರ್ಯದವರ ಮೇಲೆ ಕೈ ಇಟ್ಟಾಗಲೂ, ಇದೆ ಸಂಗತಿಯು ಜರುಗಿತ್ತು.[37] ರಿಚರ್ಡ್ ಆಸ್ಟರ್‌ರವರ ಹೇಳಿಕೆಯಂತೆ,

> ಅಪೊಸ್ತಲರ ಕೃತ್ಯದಲ್ಲಿ ಅನ್ಯಭಾಷೆ ಮಾತನಾಡಿದ ಮೂರನೆಯ ಘಟನೆಯಾಗಿದೆ. ಈ ಮೂರು ಸಮಯದಲ್ಲಿಯೂ ಪರಿಶುದ್ಧಾತ್ಮನ ಕುರಿತ ಬೋಧನೆಗೆ ಸಂಬಂಧಪಟ್ಟದ್ದಾಗಿದ್ದು, ಅವರನ್ನು ಸಭೆಗೆ ಸೇರಿಸಿಕೊಂಡ ವಿಧೇಯಕವಾಗಿರುತ್ತದೆ (2:4; 10:46; 19:5).[38]

## ಅಳವಡಿಕೆ ಮಾಡಿಕೊಳ್ಳುವಲ್ಲಿ ಉಂಟಾಗುವ ಕಷ್ಟ

ಪೌಲನ ಕಾರ್ಯವು ಎಫೆಸದಲ್ಲಿ ಉತ್ತಮವಾಗಿ ಆರಂಭಗೊಂಡಿತು ಆ ಪಟ್ಟಣದಲ್ಲಿ ಉಂಟಾದ ಮಹಾ ಸೇವೆಯ ಕುರಿತು ಮುಂದಿನ ಪಾಠದಲ್ಲಿ ನೋಡುತ್ತೇವೆ. ಇದನ್ನು ಅಂತ್ಯಗೊಳಿಸುವ ಮೊದಲು ಇದನ್ನು ಅಳವಡಿಸಿಕೊಳ್ಳವದು ಕಷ್ಟಕರವೇ, ಅಪೊಸ್ತಲರ ಕೃತ್ಯಗಳು 19:1-7ರವರೆಗಿರುವ ವಿಚಾರಗಳಲ್ಲಿರುವ ಕೆಲವನ್ನು ನಾವು ಅಳವಡಿಸಿಕೊಳ್ಳಲೇ ಬೇಕು.

ಇದರಲ್ಲಿರುವ ಸಂಗತಿಯು ಅನಗತ್ಯವೆಂಬುದು ಕೆಲವರ ಅಭಿಪ್ರಾಯ ಈ ದಿನಗಳಲ್ಲಿ (ನಾವು ಅರಿತಿರುವಂತ) ಯಾರೂ ಸಹ ಯೋಹಾನನ ಸ್ನಾನವನ್ನು ಮಾಡಿಸಿಕೊಳ್ಳುವದಿಲ್ಲ. ಒಂದು ವೇಳೆ ಲೂಕನು ಸ್ಥಳವನ್ನು ತುಂಬಿಸಲು ಹೇಳಿರಬಹುದು; ಖಂಡಿತವಾಗಿಯೂ ದೇವರು ಇದರಿಂದ ಒಂದು ಪಾಠವನ್ನು ಕಲಿಸುತ್ತಾನೆ. ನಮ್ಮ ಹಿಂದಿನ ಪಾಠದಲ್ಲಿ ಅಪೊಲ್ಲೊಸನ ಕುರಿತಾಗಿ ಅನೇಕ ಸಂಗತಿಗಳನ್ನು ಅಳವಡಿಸಿಕೊಂಡಿದ್ದೇವೆ, ಅವನು ಸಹ, ಸ್ನಾನಿಕನಾದ ಯೋಹಾನನ ದೀಕ್ಷಾಸ್ನಾನ ಮಾತ್ರ ಅರಿತಿದ್ದನು. ಆ ವಿಚಾರವನ್ನು ನಾವು ಅಳವಡಿಸಿಕೊಳ್ಳುವದಾದರೆ, ಈ ಸಂಗತಿಯನ್ನು ಅಳವಡಿಸಿಕೊಳ್ಳಬಹುದು.

19:1-7ರ ವಾಕ್ಯಾಭಾಗದಿಂದ ಏನನ್ನಾದರೂ ಅನುಸರಣೆಗೆ ತರುವದಾದರೇ: "ದೀಕ್ಷಾಸ್ನಾನವಿಲ್ಲದ ದಿಕ್ಷಾಸ್ನಾನದ ವಿಚಾರವೇ ಆಗಿರುತ್ತದೆ."[39] ಹೆಸರಿನ ದೀಕ್ಷಾಸ್ನಾನ ಹೊಂದಿರುವವರು, ದೀಕ್ಷಾಸ್ನಾನದ ಸಂಸ್ಕಾರವನ್ನು ಹೊಂದುವ ಸಮಯ ಬರುತ್ತದೆ. ಈ ದಿನದಲ್ಲಿರುವ ದೀಕ್ಷಾಸ್ನಾನಕ್ಕೆ ಯೋಹಾನನ ಸ್ನಾನವು ಸಂಬಂಧವನ್ನು ಹೊಂದದೇ

ಇರುವದರಿಂದ ಆ ಸನ್ನಿವೇಶವು ಓದಗಿ ಬರುವದಿಲ್ಲ. ಹೇಗಿದ್ದರೂ ಪದ್ಧತಿಯ ಪ್ರಕಾರ ಹೊಂದಿದ ದೀಕ್ಷಾಸ್ನಾನವು ದೀಕ್ಷಾಸ್ನಾನವಾಗಿರುವದಿಲ್ಲ.

ನಮ್ಮ ತರ್ಕದ ಕುರಿತಾಗಿ, ದೀಕ್ಷಾಸ್ನಾನವನ್ನು ವಾಕ್ಯದ ಪ್ರಕಾರ ಹೇಗೆ ಮಾಡಬೇಕು? ಎಂಬ ಪ್ರಶ್ನೆಯನ್ನು ಕೇಳಬೇಕು. ಅಪೊಸ್ತಲರ ಕೃತ್ಯದಲ್ಲಿ ನಾವುಗಳು ಮಾಡಿದ ಅಧ್ಯಯನದ ಮೂಲಕ ಕೆಲವು ಅಂಶಗಳನ್ನು ನೋಡೋಣ: "ಅದನ್ನು ಸರಿಯಾದ ಪದ್ಧತಿಯಲ್ಲಿ ಮಾಡ ಬೇಕು, ಅದನ್ನು ಸರಿಯಾದ ವ್ಯಕ್ತಿಗೂ, ಸರಿಯಾದ ಉದ್ದೇಶಕ್ಕೂ ಮಾಡಬೇಕು." "ನೀರಿನಲ್ಲಿ ಪೂರ್ಣವಾಗಿ ಮುಳುಗಿಸುವದು" ಸರಿಯಾದ ಪದ್ಧತಿ ಗ್ರೀಕ್ ಭಾಷೆಯಲ್ಲಿ "ಮುಳುಗಿಸು" ಎಂಬ ಅರ್ಥವಾಗಿದೆ.[40] ಅಪೊಸ್ತಲರ ಕೃತ್ಯಗಳು 8ರಲ್ಲಿ ದೀಕ್ಷಾಸ್ನಾನ ಹೊಂದುವವನು, ನೀರಿನ ಒಳಗೆ ಹೋಗಿ, ದೀಕ್ಷಾಸ್ನಾನ ಮಾಡಿಸಿಕೊಂಡು, ನೀರಿನಿಂದ ಮೇಲಕ್ಕೆ ಬಂದನು (ವಚನಗಳು 38, 39). ಈ ವಿಧಕ್ಕೆ ವಿಧೇಯನಾಗುವವನು ಸರಿಯಾದ ವ್ಯಕ್ತಿಯಾಗಿದ್ದಾನೆ, ಅವನು ಕರ್ತನನ್ನು ನಂಬಿ ಮಾನಸಾಂತರ ಪಟ್ಟು, ಮತ್ತು ತನ್ನ ನಂಬಿಕೆಯನ್ನು ಅರಿಕೆ ಮಾಡಿ, ವೈಯಕ್ತಿಕವಾಗಿ ತನ್ನನ್ನು ದೇವರಿಗೆ ಸಮರ್ಪಿಸಿಕೊಳ್ಳುತ್ತಾನೆ (2:37, 38; 8:37). ಅಪೊಸ್ತಲರ ಕೃತ್ಯಗಳ ಪುಸ್ತಕವು ಶಿಶುದೀಕ್ಷಾಸ್ನಾನವನ್ನು ಅನುಮೋದಿಸುವದಿಲ್ಲ ಪಾಪಕ್ಷಮೆಯನ್ನು ಹೊಂದುವದು (2:38; 22:16), ಪರಿಶುದ್ಧಾತ್ಮನ ವರಗಳನ್ನು ಪಡೆಯುವದು (2:38), ಮತ್ತು ಕರ್ತನ ಸಭೆಗೆ ಸದಸ್ಯರಾಗುವದು, ಸರಿಯಾದ ಉದ್ದೇಶ ವಾಗಿದೆ (2:41, 47[41]).

ಮೊದಲ ಎರಡು ಅಗತ್ಯತೆಗಳಲ್ಲಿ ಸರಿಯಾದ ಪದ್ಧತಿ ಹಾಗೂ ಸರಿಯಾದ ವಿಚಾರವುಳ್ಳವುಗಳನ್ನು ಅನುಸರಿಸುವದು ಕಷ್ಟಕರವಲ್ಲ. ಒಬ್ಬನು ವ್ಯಕ್ತಿಗತವಾಗಿ ಮುಳುಗಿರಲೂ ಬಹುದು ಅಥವಾ ಮುಳುಗಿಲ್ಲದೆಯೂ ಇರಬಹುದು, ಅಥವಾ ಅವನು ಆ ನಿರ್ಧಾರವನ್ನು ಮಾಡಲು ಸಮರ್ಥನೂ ಅಥವಾ ಅಸಮರ್ಥನೂ ಆಗಿರಬಹುದು.[42] ಮುಳುಗಿಸುವಂಥ ಅಂಶವು ಮಹಾಸಭೆಗಳಿಗೆ ಅವಮಾನಕರವೆಂದು ಅವರು ಪರಿಗಣಿಸಿರಬಹುದು, ಒಂದು ವೇಳೆ ಅವರು ಶಿಶು ದೀಕ್ಷಾಸ್ನಾನ ಹೊಂದದೆ ಇದ್ದರೆ, ಹೊಸ ಒಡಂಬಡಿಕೆಯ ಪ್ರಕಾರ ಮುಳುಗುವ ದೀಕ್ಷಾಸ್ನಾನವನ್ನು ಹೊಂದಬೇಕು.

ಉದ್ದೇಶದ ಕುರಿತಾದ ಈ ಅಂಶವು ಗೊಂದಲ ಉಂಟುಮಾಡಬಹುದು. ವಾಕ್ಯದ ಪ್ರಕಾರ ದೀಕ್ಷಾಸ್ನಾನ ಹೊಂದುವ ಮೊದಲು, ಒಬ್ಬನು ಏನು ಮಾಡಬಹುದೆಂದು ತೋಚದೆ ಇರಬಹುದು. ಉದ್ದೇಶದ ಪ್ರಶ್ನೆ ಏನೇ ಇದ್ದರು ಅಪೊಸ್ತಲರ ಕೃತ್ಯಗಳು 19:1-7 ಇದನ್ನು ಅನುಸರಿಸುವದು ಪ್ರಮುಖ ಅಂಶವಾಗಿರುತ್ತದೆ. ಆ ಹನ್ನೆರಡು ಜನರು ಬುದ್ಧಿವಂತರಾಗಿದ್ದರು (ವಚನ 7). ಅವರನ್ನು ನೀರಿನಲ್ಲಿ ಪೂರ್ಣ ಮುಳುಗಿಸಲಾಯಿತು (ನಮ್ಮ ಸರಿಯಾದ ವಿಚಾರ). ಅವರು ಪ್ರಾಥಮಿಕವಾಗಿ ಅದರ ಉದ್ದೇಶವನ್ನು ಅರಿಯದೆ ಇದ್ದದ್ದೆ ಸಮಸ್ಯೆಯಾಗಿತ್ತು. ದೀಕ್ಷಾಸ್ನಾನದಿಂದ, ಯೇಸುವಿನ ರಕ್ತದೊಂದಿಗೆ ಉಂಟಾಗುವ ಸಂಬಂಧವನ್ನು ಅವರು ಅರಿಯಲಿಲ್ಲ. ಪರಿಶುದ್ಧಾತ್ಮನ ವರಕ್ಕಾಗಿ ಅವರು ದೀಕ್ಷಾಸ್ನಾನ ಹೊಂದಿರಲಿಲ್ಲ; ಕರ್ತನ ಸಭೆಗೆ ಸೇರುವದಕ್ಕಾಗಿ ದೀಕ್ಷಾಸ್ನಾನ ಮಾಡಿಸಿಕೊಂಡಿರಲಿಲ್ಲ.

ಉದ್ದೇಶದ ಪ್ರಶ್ನೆಯನ್ನು ನಾವುಗಳು ಆಲೋಚಿಸುವಾಗ, ಅದನ್ನು ಸರಳೀ ಕರಿಸುವದಕ್ಕೆ ಪ್ರಯತ್ನ ಪಡಬಾರದು. ದೀಕ್ಷಾಸ್ನಾನದ ಒಂದೇ ಉದ್ದೇಶವನ್ನು ಅತಿಯಾಗಿ ಒತ್ತಿ ಹೇಳ ಬಾರದು. ಉದಾಹರಣೆಗೆ, "ಪಾಪದ ಪರಿಹಾರಕ್ಕಾಗಿ ಒಬ್ಬನು ದೀಕ್ಷಾಸ್ನಾನ ಹೊಂದಿದ್ದರೆ" ಅವನು ಸರಿಯಾದ ಸ್ನಾನವನ್ನೇ ಹೊಂದಿರುವನೆಂಬ ಹೇಳಿಕೆಯನ್ನು ನಾನು ಕೇಳಿದ್ದೇನೆ. ಆ ಹನ್ನೆರಡು ಜನರು "ಪಾಪದ ಪರಿಹಾರಕ್ಕಾಗಿ" ಸ್ನಾನ ಹೊಂದಿದ್ದಾಗ್ಯೂ (ಮಾರ್ಕ 1:4), ಅವರನ್ನು ಪುನಃ ಮುಳುಗಿಸಲಾಯಿತು ಎಂಬ ವಿಷಯವನ್ನು ಮರೆಯಬೇಡಿರಿ.[43]

ದೀಕ್ಷಾಸ್ನಾನ ಮಾಡಿಸುವವನು "ಕರ್ತನಾದ ಯೇಸುವಿನ ನಾಮದಲ್ಲಿ" ಸ್ನಾನ ಮಾಡಿಸುವುದಾದರೆ, ಅದು ಅತಿಯಾದ ಪ್ರಶ್ನೆಗೆ ಅತಿ ಸರಳವಾದ ಉತ್ತರವಾಗಿದೆ (ವಚನ 5). ಆ ಸ್ನಾನವು ವಾಕ್ಯಕ್ಕೆ ಅನುಗುಣವಾದದ್ದೆ. "ಯೇಸುವಿನ ಹೆಸರಿನಲ್ಲಿ" ಸ್ನಾನ ಹೊಂದುವುದು,

ಎಲ್ಲಾ ಹೆಸರುಗಳಲ್ಲಿ ಒಂದು ಹೆಸರನ್ನು ಹೇಳುವದು ಎಂಬುದಾಗಿರುವದಿಲ್ಲ, ಯೇಸುವಿನ "ಅಧಿಕಾರದ"[44] ನಾಮದಿಂದ ಸ್ನಾನ ಹೊಂದುವದು ಎಂಬದಾಗಿರುತ್ತದೆ. ಹೆಸರಿನ ನಿಮಿತ್ತ "ಆತನ ಹೆಸರಿನಲ್ಲಿ" ಸ್ನಾನ ಮಾಡಿಸುವದನ್ನು ನಿಷೇಧಮಾಡಲಾಗಿದೆ.

ಆ ಮನುಷ್ಯನು ಸ್ನಾನ ಹೊಂದುವಾಗ, ಹೊಂದಿದ್ದ ಮನೋಭಾವದ ಆಧಾರದಲ್ಲಿ, ಅವನ ಉದ್ದೇಶವನ್ನು ಗುರುತಿಸಲಾಗುತ್ತದೆ, ಅದರ ನಿರ್ಧಾರ ಕಷ್ಟಕರವೇ, ಮನುಷ್ಯನ ಒಳಗಿನ ಆಲೋಚನೆಗಳು ಅವನಲ್ಲಿರುವ ಜೀವಾತ್ಮಕ್ಕೆ ಹೊರತು ಮತ್ತಾರಿಗೂ ತಿಳಿಯದು (1 ಕೊರಿಂಥ 2:11ಎ). ಇನ್ನೊಂದು ಕಡೆ ಇಬ್ರಿಯ ಬರಹಗಾರನು, "*ದೇವರ ವಾಕ್ಯವು* ಹೃದಯದ ಆಲೋಚನೆಗಳನ್ನು ಉದ್ದೇಶಗಳನ್ನು ವಿವೇಚಿಸುವಂಥದ್ದೂ ಆಗಿದೆ" ಎಂದು ತಿಳಿಸಿರುವನು (ಇಬ್ರಿಯ 4:12; ಒತ್ತಿ ಹೇಳಿದ್ದು ನನ್ನದು). ದೀಕ್ಷಾಸ್ನಾನದ ಉದ್ದೇಶವನ್ನು ಮತ್ತು ಮನುಷ್ಯರ ಉದ್ದೇಶ ವನ್ನು ದೇವರ ವಾಕ್ಯದ ಆಧಾರದಿಂದ ಹೋಲಿಸಿ ನೋಡು ವುದಾದರೆ, ನಾವು ಸುರಕ್ಷಿತರಾಗಿರುತ್ತೇವೆ.

ಅನೇಕ ಸ್ತ್ರೀ ಪುರುಷರ ಸಂಗಡ, ಅನೇಕ ವರ್ಷಗಳಿಂದ ನಾನು ವಾಕ್ಯಾಧ್ಯಾನ ಮಾಡುವಾಗ ದೀಕ್ಷಾಸ್ನಾನದ ಕುರಿತು ಮನುಷ್ಯನು ನಿರ್ಮಾಣ ಮಾಡಿರುವ ಕಾರಣಗಳನ್ನು ಚರ್ಚೆಮಾಡಿರುವೆವು. ಇತರರು ದೀಕ್ಷಾಸ್ನಾನ ಹೊಂದಿದ್ದಾರೆ ಎಂಬ ಕಾರಣದಿಂದ ಕೆಲವರು ಸ್ನಾನ ಹೊಂದುತ್ತಾರೆ. ಇತರರನ್ನು ಮೆಚ್ಚಿಸುವದಕ್ಕಾಗಿ ಕೆಲವರು ದೀಕ್ಷಾಸ್ನಾನ ಹೊಂದುತ್ತಾರೆ. ಕೆಲವರು ತಾವು ಮೆಚ್ಚಿದ ಪರಿವಾರಕ್ಕೆ ಸೇರಬೇಕೆಂದು ದೀಕ್ಷಾಸ್ನಾನ ಹೊಂದುವರು ಆಂತರ್ಯದ ಶುದ್ಧತೆಗೆ ಅದು ಬಾಹಿರ ಸಂಕೇತವಾಗಿರುವದರಿಂದ ಕೆಲವರು ಸ್ನಾನ ಹೊಂದುವರು. ಕೆಲವರು ಅದರ ಬಯಕೆಯನ್ನು ಹೊಂದಿದ್ದರಿಂದ ಸ್ನಾನ ಮಾಡಿಸಿಕೊಂಡರು.[45]

ನಾನು ಜನರೊಂದಿಗೆ ವ್ಯಕ್ತಿಗತವಾದ ಅಧ್ಯಯನ ಮಾಡುವಾಗ, ಸಾಮಾನ್ಯವಾಗಿ ದೀಕ್ಷಾಸ್ನಾನದ ಕುರಿತು ಚರ್ಚಿಸುತ್ತೇನೆ (ಅದರ ಉದ್ದೇಶವನ್ನು), ಆಗ ನನ್ನ ವಿದ್ಯಾರ್ಥಿಗಳು ಸ್ನಾನ ಹೊಂದುವದಕ್ಕೂ ಅಥವಾ ಹೊಂದದೆ ಇರುವದಕ್ಕೂ ನಿರ್ಣಯವನ್ನು ಹೊಂದಬೇಕು. ಯಾಕೆಂದರೆ ಅವನು ಮಾತ್ರ ತನ್ನ ಅಂತರಾಳವನ್ನು ಬಲ್ಲವನಾಗಿರುತ್ತಾನೆ. ಆಳವಾದ ಅಧ್ಯಯನದ ನಂತರ, ನನ್ನ ವಿದ್ಯಾರ್ಥಿಗಳು, ಅವರ ನಂಬಿಕೆಯನ್ನು ಪೂರ್ಣಮಾಡುವದಕ್ಕಾಗಿ, ದೀಕ್ಷಾಸ್ನಾನದ ನಿರ್ಧಾರವನ್ನು ತೆಗೆದುಕೊಳ್ಳುವರು.

ಒಬ್ಬನು ವಾಕ್ಯದ ಪ್ರಕಾರ ದೀಕ್ಷಾಸ್ನಾನ ಹೊಂದುವಾಗ, ಸ್ನಾನದ ಕುರಿತು ಸಕಲವನ್ನು ಬಲ್ಲವನಾಗಿರಬೇಕೆಂದು ನಾನು ಹೇಳುತ್ತಿರುವದಿಲ್ಲ; ಅಥವಾ ದೀಕ್ಷಾಸ್ನಾನದ ಕುರಿತು ಒಬ್ಬನ ಜ್ಞಾನವು ಅಭಿವೃದ್ಧಿಯಾಗದೆ ಇರುವದರಿಂದ, ಅವನು ವಾಕ್ಯದ ಪ್ರಕಾರ ಸ್ನಾನ ಹೊಂದಿರುವದಿಲ್ಲ ಎಂತಲೂ ಹೇಳಿರುವದಿಲ್ಲ. ರೋಮಾಪುರ 6:3-6ರಲ್ಲಿ ದೀಕ್ಷಾಸ್ನಾನದ ಕುರಿತ ಹೊಸ ಸಾರಾಂಶವನ್ನು ಪೌಲನು ರೋಮಾಯರಿಗೆ ನೀಡಿದನು. ಇನ್ನೊಂದೆ ದೀಕ್ಷಾಸ್ನಾನದಲ್ಲಿ "ನಾವು ಹೃದಯದಿಂದ ವಿಧೇಯರಾಗಬೇಕಿರುವದರಿಂದ" (ರೋಮಾಪುರ 6:3, 4, 17, 18), ವಾಕ್ಯದ ಪ್ರಕಾರವಿರುವ ದೀಕ್ಷಾಸ್ನಾನದ ಕುರಿತ ಮೂಲ ತಿಳುವಳಿಕೆಯನ್ನು ಮತ್ತು ಅದರಲ್ಲಿ ಅಡಕವಾಗಿರುವ ಸಮರ್ಪಣೆಯ ವಿಚಾರವನ್ನು ಅರಿಯಬೇಕು.

ಮನುಷ್ಯನು ಮಾಡಿರುವ ಸಂಪ್ರದಾಯದ ದೀಕ್ಷಾಸ್ನಾನವು, ಅದು ವಾಕ್ಯದ ಪ್ರಕಾರವಾಗಿರುವ ದೀಕ್ಷಾಸ್ನಾನವೇ ಎಂಬ ಗೊಂದಲವನ್ನು ಸೃಷ್ಟಿಮಾಡುತ್ತದೆ. ಪೌಲನು ಎಫೆಸದಲ್ಲಿ ಅನುಭವಿಸಿದ ಸನ್ನಿವೇಶವನ್ನೇ, ಈ ದಿನ ನಾವು ಸಹ ಹೊಂದಿರುವೆವು. ಮಹಾ ಆ ದೇಶದಲ್ಲಿ ದೀಕ್ಷಾಸ್ನಾನದ ಸಂಗಡ, ಸ್ನಾನಿಕನಾದ ಯೋಹಾನನ ಸ್ನಾನವೂ ಆಚರಣೆಯಿಲ್ಲಿತ್ತು, ಆ ಹನ್ನೆರಡು ಜನರು ತಾವು ದೀಕ್ಷಾಸ್ನಾನ ಹೊಂದಿದ್ದರೆಂದು ನಂಬಿದ್ದರು.[46] ಮಹಾ ಆ ದೇಶದ ದೀಕ್ಷಾಸ್ನಾನವೇ ಪ್ರಮುಖವೆಂದು ಹೇಳಿ, ಅದರ ಕುರಿತ ಗೊಂದಲವನ್ನು ಪೌಲನು ತಿಳಿ ಮಾಡಿದನು, ಈ ದಿನಗಳಲ್ಲಿ ಅದನ್ನು ಅನುಸರಿಸುವುದು ಯೋಗ್ಯವಾಗಿರುತ್ತದೆ.

## ಮುಕ್ತಾಯ

ಆ ಹನ್ನೆರಡು ಜನರು, ಪುನಃ ಸ್ನಾನ ಹೊಂದಿದ ವಿಚಾರದಲ್ಲಿ, ಎರಡು ಅಂಶಗಳು ಅಡಕವಾಗಿವೆ: (1) ನಾವು ಇತರರ ಮನಸ್ಸನ್ನು ನೋಯಿಸಬಹುದೆಂಬ ಸಂಶಯವಿದ್ದರೂ ವಾಕ್ಯವನ್ನು ನೇರವಾಗಿ ಪ್ರತಿಪಾದಿಸಬೇಕು. ಹನ್ನೆರಡು ಜನರು ತಪ್ಪಾದ ಸ್ಥಾನವನ್ನು ಹೊಂದಿದ್ದರು ಎಂದು ತಿಳಿಸುವಲ್ಲಿ ಪೌಲನು ಹಿಂಜರಿಯಲಿಲ್ಲ, ನಮ್ಮ ಕೇಳುಗರು, ಯಥಾರ್ಥ ಹೃದಯವುಳ್ಳವರಾಗಿದ್ದರೆ, ನಾವು ಸಾರುವ ವಾಕ್ಯದ ಮನೋಭಾವವನ್ನು ಅರ್ಥಮಾಡಿಕೊಳ್ಳುವರು.[47] (2) ನಮ್ಮ ಧಾರ್ಮಿಕ ಆಚರಣೆಗಳನ್ನು ದೇವರ ವಾಕ್ಯದೊಂದಿಗೆ ನಾವು ಹೋಲಿಸಿಕೊಳ್ಳಬೇಕು - ಒಂದು ವೇಳೆ ಆದರಿಂದ ಮನಸ್ಸಿಗೆ ನೋವಾಗಬಹುದು. ಆ ಹನ್ನೆರಡು ಜನರು ವಿಧೇಯರಾದಂತೆ, ನಾವುಗಳು ಆಗಬಹುದೇ?

ದೇವರ ವಾಕ್ಯದ ಬೆಳಕಿನಲ್ಲಿ ಪ್ರತಿಯೊಬ್ಬರು ತಾವು ಹೊಂದಿದ ದೀಕ್ಷಾಸ್ನಾನವನ್ನು ಹೋಲಿಸಿ, ಪರೀಕ್ಷಿಸಲಿ ಎಂದು ನಾನು ಉತ್ತೇಜಿಸುತ್ತೇನೆ. ಪರಲೋಕವು ಅದ್ಭುತವಾದದ್ದೇ ನರಕವೂ ಭಯಂಕರವಾದದ್ದೇ, ನಿತ್ಯತ್ವದಲ್ಲಿ ನಮ್ಮ ಆತ್ಮವನ್ನು ನಲುಗುವಂತೆ ಮಾಡದೆ ಇರೋಣ. ನಿಮ್ಮ ದೀಕ್ಷಾಸ್ನಾನವು ಹೊಸ ಒಡಂಬಡಿಕೆಯ ಪ್ರಕಾರ ಇಲ್ಲವಾದಲ್ಲಿ ಅದನ್ನು ಈಗಲೇ ಮಾಡು ಎಂದು ನಾನು ಮನವಿ ಮಾಡುತ್ತೇನೆ!

## ದೃಷ್ಯ ಸಂಬಂಧವಾದ – ಟಿಪ್ಪಣಿ

ಮೌಲ್ಯ ಕಳೆದು ಕೊಂಡ ನಕ್ಷೆಯ ಕುರಿತು, ಹಳೆಯದಾದ ನಕ್ಷೆಯನ್ನು ಉಪಯೋಗಿಸ ಬಹುದು ಈ ದಿನಗಳಲ್ಲಿ ಕೆಲವರು ಹಳೆ ಒಡಂಬಡಿಕೆಯನ್ನು ಪ್ರತಿಪಾದಿಸುವ ಉದಾಹರಣೆಯನ್ನು ನೀಡಬಹುದು (ಇಬ್ರಿಯ 8:7; 10:9); ಕೆಲವರು ತಿಳುವಳಿಕೆಯಿಲ್ಲದ ಮೌಲ್ಯ ಕಳೆದುಕೊಂಡ ತಮ್ಮ ಅಭಿಪ್ರಾಯಗಳನ್ನು ಪ್ರತಿಪಾದಿಸುವರು (ಅಪೊಸ್ತಲರ ಕೃತ್ಯಗಳು 17:30).

ಯೋಹಾನನ ದೀಕ್ಷಾಸ್ನಾನ ಮತ್ತು ಮಹಾಜ್ಞೆಯ ದೀಕ್ಷಾಸ್ನಾನಕ್ಕೂ ಇರುವ ವ್ಯತ್ಯಾಸವನ್ನು "ಯೋಹಾನನ ದೀಕ್ಷಾಸ್ನಾನ ಮತ್ತು ಯೇಸುವಿನ ಆಜ್ಞೆಪೂರ್ವಕ ದೀಕ್ಷಾಸ್ನಾನ ಇರುವ ಹೋಲಿಕೆಗಳು" ಒಂದು ರೇಖಾಪಟವನ್ನು ಉಪಯೋಗಿಸಿ ಅದನ್ನು ನೀವು ಒಂದು ರಟ್ಟಿನ ಅಥವಾ ಕಾರ್ಡ್‌ಬೋರ್ಡ್ ಮೇಲೆ ಬರೆದು ತೋರಿಸಿರಿ. ಪಾಠದಲ್ಲಿರುವ ವಾಕ್ಯಗಳನ್ನು ಇದರೊಂದಿಗೆ ಹೋಲಿಸಿ ನೋಡಿರಿ."

ಸರಿಯಾದ ದೀಕ್ಷಾಸ್ನಾನದ ಕುರಿತು (ಕ್ರಿಯೆ, ವಿಷಯ ಮತ್ತು ಉದ್ದೇಶ) ಒಂದು ವಸ್ತುವಿನ ಸಹಾಯದಿಂದ ವರ್ಣಿಸಬಹುದು. ಮೂರು ಕಾಲಿರುವ ಒಂದು ಮೇಜನ್ನು ತಲೆಕೆಳಗಾಗಿ ಹಿಡಿದು, ಈ ಮೂರು ಕಾಲುಗಳಲ್ಲಿ ಯಾವುದು ಪ್ರಮುಖ ಎಂಬ ಪ್ರಶ್ನೆಯನ್ನು ಕೇಳಿರಿ. ಪ್ರಮುಖವಲ್ಲದ್ದನ್ನೂ ಕೇಳಿರಿ. ಆ ಮೂರು ಕಾಲುಗಳು ಪ್ರಮುಖವೆ. ಅದರಲ್ಲಿ ಒಂದನ್ನು ಕಳಕೊಂಡರೂ, ಆ ಸ್ಟೂಲ್ ಕೆಲಸಕ್ಕೆ ಬರುವದಿಲ್ಲ. ದೀಕ್ಷಾಸ್ನಾನದಲ್ಲಿ ವ್ಯಾದ ಪ್ರಕಾರ ಕಳಕೊಂಡಿರುವ ಒಂದು ಅಂಶವನ್ನು ಪ್ರಸ್ತಾಪಿಸಿ (ಸ್ಟೂಲಿನ ಒಂದು ಕಾಲನ್ನು ಈ ಮೊದಲೇ ಸಡಿಲ ಮಾಡಿಕೊಂಡಿರಿ) ಒಂದನ್ನು ಬಿಚ್ಚಿ ಆಸ್ಟೂಲಿನ ಮೇಲೆ ಒಬ್ಬರನ್ನು ಕೂತು ಕೊಳ್ಳಲು ತಿಳಿಸಿ. ಒಂದು ಮೂರು ಕೀಗಳುಳ್ಳ ಬೀಗವನ್ನು ಬಳಸಬಹುದು. ಅದನ್ನು ತೆಗೆಯುವಾಗ ಮೂರು ಕೀಗಳ ಅಗತ್ಯವಿದೆ ಎಂದು ತಿಳಿಸಿರಿ. ಅದೇ ರೀತಿಯಲ್ಲಿ ದೇವರು ಮೆಚ್ಚುವಂಥ ದೀಕ್ಷಾಸ್ನಾನಕ್ಕೆ ಈ ಮೂರು ಸಂಗತಿಗಳು ಅತಿ ಅವಶ್ಯ.

## ಪ್ರಸಂಗದ ಟಿಪ್ಪಣಿ

ನನ್ನ ಸ್ನೇಹಿತನಾದ ಮಾರ್ಕ ಕ್ಲೇರ್‌ಡೇ. ಅಪೊಸ್ತಲರ ಕೃತ್ಯಗಳು 19ರ ಕುರಿತು ಪ್ರಸಂಗಿಸಿದಾಗ, ವಚನ 1 ಕೊರಿಂಥ 20ರವರೆಗಿನ ವಾಕ್ಯಭಾಗದಿಂದ "ಸಭೆಯ ಯಶಸ್ವಿಗೆ ಅಗತ್ಯವಿರುವ ಮೂರು ಸಂಗತಿಗಳು" ಎಂಬ ಪ್ರಸಂಗ ಮಾಡಿದರು. ಅವರ ಈ ವಿಚಾರದಿಂದ ನಾನು, ಸಭೆಯನ್ನು ಬೆಳೆಸುವುದು ಹೇಗೆ ಎಂಬ ವಿಚಾರವನ್ನು ಮಾಡಿದೆನು. ಮಾರ್ಕ ನುರಿತ ತೋಟಗಾರನಾಗಿದ್ದರಿಂದ, ನಾನು ಒಬ್ಬ ತೋಟ ಗಾರನಾಗಿದ್ದರಿಂದ, ನಾನು ಒಂದು ತೋಟದ ಹೋಲಿಕೆಯ ಚಿತ್ರಣವನ್ನು ಮಾಡಿದೆನು: (1) ಬೀಜವು ಶುದ್ಧವಾಗಿರಲಿ (ವಚನಗಳು 1-7). (2) ಬಿತ್ತುವಲ್ಲಿ ನಿಪುಣರಾಗಿರಬೇಡಿ (ವಚನಗಳು 8-10). (3) ಬೀಜವನ್ನು ಬಿತ್ತುವ ಮೊದಲು, ಭೂಮಿಯನ್ನು ಹದಗೊಳಿಸಿರಿ (ವಚನ ಗಳು 11, 12). (4) ಕಳೆಯನ್ನು ಕೀಳುವಾಗ ಎಚ್ಚರವಾಗಿರಿ (ವಚನಗಳು 13-20)!

ಈ ಅಪೊಸ್ತಲರ ಕೃತ್ಯದ ಈ ಪುಸ್ತಕದಲ್ಲಿ, ದೀಕ್ಷಾಸ್ನಾನಗೊಂಡು ಪರಿವರ್ತನೆಗೊಂಡ ಹನ್ನೆರಡು ಜನರ ಕುರಿತ ಅಧ್ಯಯನವನ್ನು ತಿಳಿಸಿರುವೆನು. 19:1ರಲ್ಲಿ ಪೌಲನ ಮೂರನೆಯ ಸೇವಾ ಪ್ರಯಾಣದ ಆರಂಭವನ್ನು ನೋಡುತ್ತೇವೆ (ಲೂಕನ ಪ್ರಕಾರ) ("ದೀಕ್ಷಾಸ್ನಾನವಲ್ಲದ ದೀಕ್ಷಾಸ್ನಾನದ ವಿಷಯವನ್ನು ಪರಿಶೀಲನೆ ಮಾಡಿದೆವು?") ಆ ತಲೆಬರಹದ ಬದಲಾವಣೆ ಬಯಸಿದಲ್ಲಿ "ದೀಕ್ಷಾಸ್ನಾನ ಹೊಂದಿದ್ದ ಹನ್ನೆರಡು ಜನರ ಪರಿವರ್ತನೆ" ಎಂದು ಮಾಡಬಹುದು. ದೀಕ್ಷಾಸ್ನಾನ ಹೊಂದಿ ದವರು, ಪರಿವರ್ತನೆಗೊಳ್ಳುವ ಅಗತ್ಯತೆ ಇತ್ತೆ? ನಮ್ಮ ಅಧ್ಯಯದ ಪ್ರಕಾರ ಹೌದು,

ಪೌಲನ ಸಂಗಡವಿದ್ದ ತೀತನ ಕುರಿತಾಗಿಯೂ ಹೆಚ್ಚಿನ ಪಾಠವನ್ನು ಮಾಡಬಹುದು, ಅವನನ್ನು ಕುರಿತು "ಅಪೊಸ್ತಲರ ಕೃತ್ಯದಲ್ಲಿನ ಮರೆಯಾಗಿದ್ದ ವ್ಯಕ್ತಿ" ಎಂಬ ಪಾಠವನ್ನು ಮಾಡಬಹುದು.

ಟಿಪ್ಪಣೆಗಳು

[1]ಇದರ ವಿವರಣೆಗಾಗಿ "ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿರುವ" ಸಹೋದರರನ್ನು ಬಲಪಡಿಸುವದು ಹೇಗೆ ಎಂಬ ಪಾಠವನ್ನು ನೋಡಿರಿ. [2]ಅಪೊಸ್ತಲರ ಕೃತ್ಯಗಳು 18:27ರಲ್ಲಿ "ಸಹೋ ದರರು" ಎಂಬುದಾಗಿದೆ. [3]12ರ ಬದಲಾಗಿ 11 ಅಥವಾ 13 ಜನರು ಇರಲು ಸಾಧ್ಯ ಎಂಬುದು ನನ್ನ ಊಹೆ. [4]ಹನ್ನೆರಡು ಜನರ ಕುರಿತು ಅಕ್ವಿಲ ಮತ್ತು ಪ್ರಿಸ್ಕಿಲ್ಲ ತಿಳಿದಿದ್ದರೂ, ಅಪೋಲೋಸನಿಗೆ ಮಾರ್ಗದರ್ಶನ ನೀಡಿದಂತೆ, ಅವರಿಗೆ ಮಾರ್ಗದರ್ಶನ ನೀಡಲು ಅರಿಯದೆ ಇರಬಹುದು ಆದ್ದರಿಂದ ಪೌಲನೇ ಆ ಸಮಸ್ಯೆಯನ್ನು ಬಗೆ ಹರಿಸಲಿ ಎಂದು ಕಾಯ್ದರು. [5]ನಾಲ್ಕನೇ ಶತಮಾನದ ಜಾನ್ ಕ್ರಿಸ್ಟಮ್ ಮೊದಲಿಗೆ ಇದರ ಅನುವಾದ ಮಾಡಿರುವರು. [6]I. Howard Marshall, *The Acts of the Apostles,* The Tyndale New Testament Commentaries, gen. ed. R. V. G. Tasker (Grand Rapids, Mich.: Wm. B. Eerdmans Publishing Co., 1980), 305-6. (Emphasis his.) [7]ಅವರು ಪೌಲನನ್ನು ಎದುರುಗೊಂಡಾಗ, ಪೌಲನು ಅವರ ಆತ್ಮೀಕ ವಿಷಯದಲ್ಲಿ ಪ್ರಶ್ನೆ ಮಾಡಿದ್ದರೂ, ಅದರ ಹಿನ್ನಲೆಯನ್ನು ಅವನು ಅರಿತಿರಲಿಲ್ಲ. [8]KJVಯಲ್ಲಿ "ಹೀಗಿರುವದರಿಂದ" ಎಂಬ ಉತ್ತಮ ಅನುವಾದವಿದೆ. [9]ಅವರು ಪೌಲನನ್ನು ಎದುರುಗೊಂಡಾಗ, ಪೌಲನು ಅವರ ಆತ್ಮೀಕ ವಿಷಯದಲ್ಲಿ ಪ್ರಶ್ನೆ ಮಾಡಿದ್ದರೂ, ಅದರ ಹಿನ್ನಲೆಯನ್ನು ಅವನು ಅರಿತಿರಲಿಲ್ಲ. [10]ಅಪೊಸ್ತಲರ ಕೃತ್ಯಗಳು 2:38ರ ಟಿಪ್ಪಣಿಯನ್ನು *ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕವನ್ನು ನೋಡಿರಿ. ಇದನ್ನು ಸಹ ಓದಿ ನೋಡಿರಿ, "ದೈವೀಕ ಶಕ್ತಿಯ ಪ್ರಾಯೋಜನೆ" ಎಂಬ ಪಾಠವನ್ನು *ಅಪೊಸ್ತಲರ ಕೃತ್ಯಗಳು, 2ನೇ ಪುಸ್ತಕವನ್ನು* ನೋಡಿರಿ.

[11]ಆತ್ಮನನ್ನು ಸ್ವೀಕರಿಸುವ ಮೂಲಕ ಒಬ್ಬನು ಕ್ರೈಸ್ತನಾಗುವನು: ಎಂಬುದು ಪೌಲನ ಆಲೋಚನೆ (ಗಲಾತ್ಯ 3:2) ಒಬ್ಬನು ರಕ್ಷಿಸಲ್ಪಡುವಾಗ ಆತ್ಮನ ಮುದ್ರೆ ಹೊಂದುವನು (ಎಫೆಸ 1:13). [12]ಹಳೆ ಒಡಂಬಡಿಕೆಯು ಆತ್ಮನ ಬಗ್ಗೆ ತಿಳಿಸುವದರಿಂದ, ಅವರು ಅದನ್ನು ಮನದಟ್ಟು ಮಾಡಿಕೊಂಡಿದ್ದರೆ, ಆತ್ಮನ ವಿಚಾರ ತಿಳಿಯಬಹುದಿತ್ತು (ಕೀರ್ತನೆ 51:11; ಯೆಶಾಯ 63:11). [13]ಇಟಾಲಿಕ್ ಭಾಷೆಯಲ್ಲಿ

ನೀಡಲಾಗಿದೆ. NASB ಅಪೊಸ್ತಲರ ಕೃತ್ಯಗಳು 19:2ರಲ್ಲಿ ಅದೇ ಪದ ಪ್ರಯೋಗವಾಗಬೇಕಿತ್ತು. [14]"ಆತ್ಮನನ್ನು ಯಾರಾರು ಸ್ವೀಕರಿಸಿದರು" ಎಂಬ ವೆಸ್ಟರ್ನ್ ಟೆಕ್ಸ್ ಹೇಳುತ್ತದೆ. [15]"ಯಾವುದಕ್ಕೆ" ಎಂಬುದು ಗ್ರೀಕ್ ವ್ಯಾಖ್ಯಾನ ದೀಕ್ಷಾಸ್ನಾನ ಹೊಂದಿದವರ ಕುರಿತಾಗಿದೆ (ರೋಮಾಪುರ 6:3, 4; ಗಲಾತ್ಯ 3:27). [16]ಅವರು ದೀಕ್ಷಾಸ್ನಾನ ಹೊಂದಿರುವರೆಂದು ಪೌಲನು ನೆನಸಿಕೊಂಡಿದ್ದನು. ಹೊಸ ಒಡಂಬಡಿಕೆಯಲ್ಲಿ ದೀಕ್ಷಾಸ್ನಾನ ಹೊಂದದ ವಿಶ್ವಾಸಿಯನ್ನು ಧ್ಯಾನಿಸಿರುವುದು ಅಪರೂಪವಾಗಿದೆ (F. F. Bruce, *The Book of Acts*, rev. ed. [Grand Rapids, Mich.: Wm. B. Eerdmans Publishing Co., 1988], 363-64). [17]ಹನ್ನೆರಡು ಜನರು ಹಾಗೂ ಅಪೊಲೊಸನು ಒಂದೇ ವ್ಯಕ್ತಿಯಿಂದ ಬೋಧನೆಯನ್ನು ಕೇಳಿ ದೀಕ್ಷಾಸ್ನಾನ ಹೊಂದಿರಬಹುದು, ಅವರು ಯೋಹಾನನ ಶಿಷ್ಯರೂ ಇರಬಹುದು. ಇದರ ಪ್ರಕಾರ ಅಪೊಲೊಸನು ಪುನಃ ಮುಳುಗು ಸ್ನಾನವನ್ನು ಹೊಂದಬೇಕಿತ್ತು. [18]ಹನ್ನೆರಡು ಜನರು ಸ್ನಾನ ಹೊಂದಿದರು, ಆದರೆ ಅಪೊಲೊಸನ ಹೊಂದಲಿಲ್ಲ ಎಂಬುದಕ್ಕೆ ಈ ಹಿಂದೆಯೇ ಕಾರಣವನ್ನು ನೀಡಲಾಗಿದೆ. [19]J. W. McGarvey, *New Commentary on Acts of Apostles,* vol. 1 (Delight, Ark: Gospel Light Publishing Co., n.d.), 152. [20]Richard Oster, *The Acts of the Apostles*, Part 2, The Living Word Commentary (Austin, Tex.: Sweet Publishing Co., 1979), 87.

[21]ವೈಯಕ್ತಿಕವಾದ ಉದಾಹರಣೆಯನ್ನು ನೀಡಬಹುದು. [22]ಪೌಲನು ತಪ್ಪು ಬೋಧಕರ ಕುರಿತು ಸಮಯಕಳೆಯದೆ, ಅವನು ಸತ್ಯವನ್ನು ಉಪದೇಶಿ ಸಿದನು. [23]ಯೋಹಾನನ ಕುರಿತ ಸತ್ಯವೇದದ ಕೊನೆಯ ಹೇಳಿಕೆ. [24]ಆ ಅದ್ಭುತಗಳ ಬೋಧನೆಯನ್ನು ಈ ದಿನವೂ ನಂಬಲಾಗುತ್ತದೆ. [25]ಪೌಲನ ದಿವಸದ "ಒಂದೇ ದೀಕ್ಷಾಸ್ನಾನದ ಕುರಿತು" ವಿವಿಧ ಕ್ರಮಗಳನ್ನು ತಿಳಿಸಿರುವೆನು: ಯೇಸುವಿನ ಹೆಸರಿನ, ಕ್ರೈಸ್ತರು ನೀಡುವ ಮಹಾ ಆ ದೇಶದ ಯೇಸುವಿನ ದೀಕ್ಷಾಸ್ನಾನ ಇವೆಲ್ಲವೂ ಮಹಾ ಆ ದೇಶದ ಸ್ನಾನ (ಮತ್ತಾಯ 28:19; ಲೂಕ 16:16). ಪಂಚಶತ್ತಮ ದಿನದಂದು ಮೊದಲನೆಯಬಾರಿ ಪ್ರಸಂಗಿಸಲಾಯಿತು (ಅಪೊಸ್ತಲರ ಕೃತ್ಯಗಳು 2:38). [26]*ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕದಲ್ಲಿ, 2:37ರ ಟಿಪ್ಪಣಿ ನೋಡಿರಿ. [27]*ಅಪೊಸ್ತಲರ ಕೃತ್ಯಗಳು, 2ನೇ* ಪುಸ್ತಕದಲ್ಲಿ, 22:16ರ ಟಿಪ್ಪಣಿ, "ಕೊಲೆಗಳ ಪಾತಕನು ಮುಳುಗಿಸಲ್ಪಟ್ಟನು" ಎಂಬ ಪಾಠವನ್ನು ನೋಡಿರಿ. [28]"ಕರ್ತನಾದ ನಾಮದಲ್ಲಿ" ಮಾಡುವ ವಿಷಯಗಳ ಕುರಿತು "ಆತನ ನಾಮದಲ್ಲಿ" ಎಂಬ ಪಾಠವನ್ನು *ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕದಲ್ಲಿ ನೋಡಿರಿ. [29]ಅಪೊಸ್ತಲರ ಕೃತ್ಯಗಳು 8:38ರ ಟಿಪ್ಪಣಿ ಹಾಗು "ದೀಕ್ಷಾಸ್ನಾನ" ಎಂಬ *ಅಪೊಸ್ತಲರ ಕೃತ್ಯಗಳು, 2ನೇ* ಪುಸ್ತಕದಲ್ಲಿ, ಈ ಪಾಠ ನೋಡಿರಿ. [30]*ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕದಲ್ಲಿ 2:38 ಮೇಲಿನ ಟಿಪ್ಪಣಿ ನೋಡಿರಿ. ಇದರ ಸಮನಾದ ಗ್ರೀಕ್ ಪದವನ್ನು ಮಾರ್ಕ 1:4; ಲೂಕ 3:3ರಂತೆ "ಮುಳುಗಿಸು" ಎನ್ನಲಾಗಿದೆ,

[31]ಅದು ವೇದಕ್ಕೆ ಅನುಗುಣವಾದ ಸ್ನಾನ ಹನ್ನೆರಡು ಜನರ ಕುರಿತು "ಪುನ ಮುಳು ಗಿಸಲ್ಪಟ್ಟರು" ಎಂಬ ವ್ಯಾಖ್ಯಾನವನ್ನು ನಾನು ನೀಡಿರುವೆನು. ಮಹಾ ಆ ದೇಶದ ದೀಕ್ಷಾಸ್ನಾನ ಒಂದೇ ಸಾಲಿಯದ್ದಾಗಿರುತ್ತದೆ. ಮಕ್ಕಳು ನೀರಿನಲ್ಲಿ ಆಟವಾಡುವಾಗ, ಮುಳುಗಿ, ಅದನ್ನು ದೀಕ್ಷಾಸ್ನಾನ ಎಂದು ಹೇಳವ ಉದಾಹರಣೆಯನ್ನು ನೀಡಬಹುದು. ಅದು ನೀರಿನಲ್ಲಿ ಮುಳುಗುವ ದೀಕ್ಷಾಸ್ನಾನವಾದರೂ, ವಾಕ್ಯಕ್ಕನು ಗುಣವಾದ ದೀಕ್ಷಾಸ್ನಾನವಲ್ಲ. [32]"ಅಳವಡಿಸಿಸಿಕೊಳ್ಳಲು ಉಂಟಾಗುವ ಅಡಚಣೆ" ಎಂಬ ಈ ಪುಸ್ತದ ಮುಂದಿನ ಪಾಠವನ್ನು ನೋಡಿರಿ. [33]"ಅನ್ಯ ಭಾಷೆ" ಎಂಬ ಮುಂದಿನ ಪಾಠ ನೋಡಿರಿ. [34]ಅಪೊಸ್ತಲರ ಕೃತ್ಯಗಳು 8:17, 18ರ ಟಿಪ್ಪಣಿ *ಅಪೊಸ್ತಲರ ಕೃತ್ಯಗಳು, 2ನೇ* ಪುಸ್ತಕವನ್ನು ನೋಡಿರಿ. [35]"ಮೂರು ವಿಧವಾದ ದೈವೀಕ ಶಕ್ತಿಯ" *ಅಪೊಸ್ತಲರ ಕೃತ್ಯಗಳು, 2ನೇ* ಪುಸ್ತಕದ ಟಿಪ್ಪಣಿ ನೋಡಿರಿ. [36]ಪೇತ್ರನ ಹಾಗೂ ಪೌಲನ ಕಾರ್ಯದ ಬಗ್ಗೆ ಲೂಕನು ಅನೇಕ ಹೋಲಿಕೆಗಳನ್ನು ನೀಡಿರವನು. ಉದಾಹರಣೆ ಕುಟಂನ ಸ್ವಸ್ಥತೆ, ದೆವ್ವ ಬಿಡಿಸಿದ್ದು, ಸೆರೆಮನೆಯಿಂದ ತಪ್ಪಿಸಿಕೊಂಡದ್ದು, ಸತ್ತವರನ್ನು ಎಬ್ಬಿಸಿದ್ದು, ಈ ಹಿಂದೆ ಕೆಲಸ ಮಾಡಿದವನ ಕೆಲಸವನ್ನು ಮುಂದುವರಿಸಿ ಯಶಸ್ಸನು ಸಾಧಿಸಿದ ರೊಂದಿಗೂ ದೇವರು ಇರುವನೆಂದು ತೋರಿಸಲಾಗಿದೆ (ಉದಾಹರಣೆ ಮೋಶೆ, ಯೆಹೋ ಶುವ, ಎಲಿಯ, ಎಲೀಶ). [37]"ಸಮಾರ್ಯರ ಪರಿವರ್ತನೆಯ" ಅಪೊಸ್ತಲರ ಕೃತ್ಯಗಳು ಪುಸ್ತಕ 2ರಲ್ಲಿ ಈ ಪಾಠವನ್ನು ನೋಡಿರಿ. [38]ಆಸ್ಟರ್, 88. [39]ಕೆಲವು ಹೇಳಿಕೆಯಲ್ಲಿರುವ ಟಿಪ್ಪಣಿ 31ರ ಪ್ರಕಾರ ದೀಕ್ಷಾಸ್ನಾನ ಎಂಬುದು ವಾಕ್ಯದ ಪ್ರಕಾರ ಇರದ ದೀಕ್ಷಾಸ್ನಾನ, ಅದು ಮನುಷ್ಯ ನಿರ್ಮಿತವಲ್ಲದ ದೀಕ್ಷಾಸ್ನಾನ, ವಾಕ್ಯಪ್ರಕಾರದ ದೀಕ್ಷಾಸ್ನಾನ. [40]ನೋಡಿರಿ "ದೀಕ್ಷಾಸ್ನಾನ" *ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕದಲ್ಲಿ ಈ ಪಾಠವನ್ನು ನೋಡಿರಿ.

[41]ಅಪೊಸ್ತಲರ ಕೃತ್ಯಗಳು 2:47 ಮೇಲೆ *ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕದಲ್ಲಿ ಈ ಟಿಪ್ಪಣಿ ನೋಡಿರಿ. [42]ವೃದ್ಧನಾಗಿದ್ದರೂ, ದೀಕ್ಷಾಸ್ನಾನದ ಮುನ್ನ ಅವನ ಮಾನಸಾಂತರವು ಯಥಾರ್ಥವಾದದ್ದೇ

ಎಂದು ಪರಿಶೀಲಿಸಬೇಕು. [43]ಮಾರ್ಮನ್ ಎಂಬ ಪಂಗಡದವರು, ಪಾಪದ ಪರಿಹಾರಕ್ಕಾಗಿ ದೊಡ್ಡವರಿಗೆ ದೀಕ್ಷಾಸ್ನಾನ ಮಾಡಿಸುವರು, ಹಾಗೂ ಯೇಸುವನ್ನು ವಿಭಿನ್ನವಾಗಿ ವಿವರಿಸುವರು ಅದನ್ನು ನಾನು ಒಪ್ಪಲಾರೆ. [44]"*ಧರ್ಮಶಾಸ್ತ್ರದ ನಾಮದಲ್ಲಿ* ಇದನ್ನು ತೆರೆಯಿರಿ" ಎಂಬುದೊಂದಿಗೆ ಹೋಲಿಸಿರಿ. [45]ಇದು ದೊಡ್ಡವರ ದೀಕ್ಷಾಸ್ನಾನಕ್ಕೂ ಸಂಬಂಧಿಸಿದ ಕ್ರೈಸ್ತ ಹೆಸರು ನೀಡಲು, ಚಿಕ್ಕ ಮಕ್ಕಳಿಗೆ ಸ್ನಾನ ಮಾಡಿಸುವರು. [46]ಪೌಲನು ಅಲ್ಲಿಗೆ ಬರುವವರೆಗೆ, ಎಫೆಸ ಕ್ರೈಸ್ತರು ಹಾಗೂ ಬಹುಶಃ ಅಕ್ವಿಲ ಮತ್ತು ಪ್ರಿಸ್ಕಿಲರು, ಯೋಹಾನನ ಸ್ನಾನವನ್ನು ಒಪ್ಪಿಕೊಂಡಿರಬಹುದು. [47]"ಸತ್ಯವನ್ನು" ಪ್ರೀತಿಯಿಂದ ಹೇಳಬೇಕು (ನೋಡಿರಿ ಎಫೆಸ 4:15).

| ಯೋಹಾನನ ದೀಕ್ಷಾಸ್ನಾನ | | ಯೇಸುವಿನ ಆಜ್ಞೆಪೂರ್ವಕವಾದ ದೀಕ್ಷಾಸ್ನಾನ |
|---|---|---|
| ನೀರಿನಲ್ಲಿ ಮುಳುಗಿಸುವುದು | | ನೀರಿನಲ್ಲಿ ಮುಳುಗಿಸುವುದು |
| ಸಿದ್ಧಮಾಡುವ ದೀಕ್ಷಾಸ್ನಾನ | | ಸಫಲಗೊಳಿಸುವ ದೀಕ್ಷಾಸ್ನಾನ |
| ಮನಸಾಂತರಕ್ಕೆ ದೀಕ್ಷಾಸ್ನಾನ | | ವಿಶ್ವಾಸದ ದೀಕ್ಷಾಸ್ನಾನ |
| ಮುಂಬರುವ ಕ್ರಿಸ್ತನ ಕಡೆ | | ಮುಂಚಿತವಾಗಿ ಸುವಾರ್ತೆ ಸಾರಲ್ಪಟ್ಟಿತು |
| ಕ್ರಿಸ್ತನನ್ನು ಮುಂದೆ ನೋಡುವದು (ಮತ್ತು ಶಿಲುಭೆಯನ್ನು) | | ಕ್ರಿಸ್ತನನ್ನು ಹಿಂತಿರುಗಿ ನೋಡುವದು (ಮತ್ತು ಶಿಲುಭೆಯನ್ನು) |
| ಪಾಪಗಳನ್ನು ಒಪ್ಪಿಕೊಳ್ಳಲು | | ಯೇಸುವಿನಲಿಲ ವಿಶ್ವಾಸವನ್ನು ಒಪ್ಪಿಕೊಳ್ಳುವದು |
| ಯಾರ ಹೆಸರಲ್ಲಿ ದೀಕ್ಷಾಸ್ನಾನ ಮಾಡಿಸಿಲ್ಲ | | ತಂದೆ, ಕುಮಾರ, ಪರಿಶುದ್ಧಾತ್ಮನ ನಾಮದಲ್ಲಿ |
| ಪಾಪಗಳ ಕ್ಷಮಾಪಣೆಗೆ | | ಪಾಪಗಳ ಕ್ಷಮಾಪಣೆಗಾಗಿ |
| ಪರಿಶುದ್ಧಾತ್ಮನ ವಾಗ್ದಾನವಿಲ್ಲ | | ಪರಿಶುದ್ಧಾತ್ಮನ ವಾಗ್ದಾನ |

*ಯೋಹಾನನ ದೀಕ್ಷಾಸ್ನಾನ ಮತ್ತು ಯೇಸುವಿನ ಆಜ್ಞೆಪೂರ್ವಕ ದೀಕ್ಷಾಸ್ನಾನ ಇರುವ ಹೋಲಿಕೆಗಳು*